ಆಣೆ ಪ್ರಮಾಣಗಳು



ಡಾ. ಸಿ. ಪಿ. ನಾಗರಾಜ

ಜನಪ್ರಿಯ ಜಾನಪದ ಪುಸ್ತಕ ಮಾಲೆ - ೨೧

ಆಣೆ ಪ್ರಮಾಣಗಳು

ಜನಪದ ನಡಾವಳಿ

ಡಾ|| ಸಿ. ಪಿ. ನಾಗರಾಜ

ನಂ. 75/ಎ, 5ನೇ ಕ್ರಾಸ್, ಕೃಷ್ಣ ಗಾರ್ಡನ್

ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು - 560059.

ಕರ್ನಾಟಕ ಜಾನಪದ ಪರಿಷತ್ತು

ನಂ. 1, ಜಲದರ್ಶಿನಿ ಬಡಾವಣೆ,

ಎಂ. ಎಸ್. ರಾಮಯ್ಯ ಆಸ್ಪತ್ರೆ, ಮಹಾದ್ವಾರದ ಹತ್ತಿರ

ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು - 560 054

ANE PRAMANAGALU – Folk habits of oaths –
by Dr. C. P. NAGARAJA.
Published by KARNATAKA JANAPADA PARISHAT
No.1, Jaladarshini Layout, Near M.S.Ramaiah Hopital Gate,
New B.E.L. Road, Bangalore - 560064

Pages : 40 Price : Rs. 15 First Edition : 2008.

ಪ್ರಥಮ ಮುದ್ರಣ : **2008**

ಪ್ರತಿಗಳು : **2000**

ಪುಟಗಳು : **40**

ಬೆಲೆ : ರೂ. **15** (ಹದಿನೈದು ರೂಪಾಯಿ)

ಮುದ್ರಕರು

ಕೃತಿಕ ಪ್ರಿಂಟ್ ಆ್ಯಡ್
ನಂ. **58, 1**ನೇ ಕ್ರಾಸ್, ಜೆ.ಕೆ.ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - **560030**
ಮೊಬೈಲ್ : **98441 14958**

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ - ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು-ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಡಾ. ಸಿ. ಪಿ. ನಾಗರಾಜ** ಅವರು **ಆಣೆ ಪ್ರಮಾಣಗಳು** ಎಂಬ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

1.4.2008
ಬೆಂಗಳೂರು

ಆಣೆ ಪ್ರಮಾಣಗಳು

ವ್ಯಕ್ತಿಗಳ ನಡುವೆ ನಾನಾ ಕಾರಣಗಳಿಂದಾಗಿ ಪರಸ್ಪರ ಅನುಮಾನ, ಅಪನಂಬಿಕೆಗಳುಂಟಾದಾಗ, ನಡೆನುಡಿಗಳಲ್ಲಿ ಲೋಪದೋಷಗಳು ಕಂಡುಬಂದಾಗ, ವ್ಯಾಜ್ಯ ಪ್ರಾರಂಭಗೊಂಡು ಮಾತಿನ ಚಕಮಕಿ ನಡೆಯತೊಡಗುತ್ತದೆ. ಒಬ್ಬ ಮತ್ತೊಬ್ಬನ ಮೇಲೆ ಆರೋಪವನ್ನು ಹೊರಿಸುತ್ತಾನೆ. ಆರೋಪಕ್ಕೆ ಗುರಿಯಾದ ವ್ಯಕ್ತಿಯು ಅದನ್ನು ಉಗ್ರವಾಗಿ ಪ್ರತಿಭಟಿಸುತ್ತಾನೆ ಅಥವಾ ಸೌಮ್ಯವಾಗಿಯೇ ನಿರಾಕರಿಸುತ್ತಾನೆ. ಕೆಲವು ಬಗೆಯ ವ್ಯಾಜ್ಯಗಳಲ್ಲಿ ಈ ಬಗೆಯ ಮಾತಿನ ಘರ್ಷಣೆಯು ಸ್ವಲ್ಪದರಲ್ಲೇ ಮುಕ್ತಾಯಗೊಳ್ಳದೆ, ಆರೋಪ ಹಾಗೂ ನಿರಾಕರಣೆಯ ಮಾತುಗಳು ಮತ್ತೆ ಮತ್ತೆ ಮುಂದುವರಿಯುತ್ತವೆ. ಇಂತಹ ಸಂದರ್ಭಗಳಲ್ಲಿ ಭಾಗಿಗಳು ಕೋಪ-ತಾಪಗಳಿಗೆ ಒಳಗಾಗಿ ಏಕಮುಖವಾದ ದೈಹಿಕ ಹಲ್ಲೆಗೆ ಅಥವಾ ಪರಸ್ಪರ ಹೊಡೆದಾಟಕ್ಕೆ ತೊಡಗಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಾನಿಯನ್ನು ಅನುಭವಿಸುವುದರ ಬದಲು, ಆಣೆಯಿಡುವ ಮತ್ತು ಪ್ರಮಾಣ ಮಾಡುವ ಕ್ರಿಯೆಗಳ ಮೂಲಕ ವ್ಯಾಜ್ಯಕ್ಕೆ ಒಂದು ತಾತ್ಕಾಲಿಕ ಪರಿಹಾರವನ್ನು ಕಂಡುಕೊಳ್ಳುತ್ತಾರೆ.

ವ್ಯಾಜ್ಯದಲ್ಲಿ ಸಿಲುಕಿದ ವ್ಯಕ್ತಿಗಳು ಸಮಸ್ಯೆಗೆ ಕಾರಣವಾದ ವಿಷಯಕ್ಕೆ ಸಂಬಂಧಪಟ್ಟಂತೆ, ತಮ್ಮ ತಮ್ಮ ನಿಲುವುಗಳನ್ನು ಸಮರ್ಥಿಸಿಕೊಂಡು ಆರೋಪವನ್ನು ಸಾಬೀತುಪಡಿಸುವ ಅಥವಾ ನಿರಾಕರಿಸುವ ದಿಶೆಯಲ್ಲಿ ವಿಫಲರಾದಾಗ, ಆರೋಪಕ್ಕೆ ಗುರಿಯಾದ ವ್ಯಕ್ತಿಗಳಲ್ಲಿ ಕೆಲವರು ಉದ್ದೇಶಪೂರ್ವಕವಾಗಿ ಅಥವಾ ಅನಿವಾರ್ಯವಾಗಿ ಆಣೆಯಿಡುವ, ಪ್ರಮಾಣ ಮಾಡುವ ಕ್ರಿಯೆಯಲ್ಲಿ ತೊಡಗುತ್ತಾರೆ. ತಮ್ಮ ಬುದ್ಧಿಶಕ್ತಿಯ ಮೂಲಕ ಪರಿಹರಿಸಿಕೊಳ್ಳಲಾಗದ ವ್ಯಾಜ್ಯವನ್ನು ದೈವದ ಅಥವಾ ಅಗೋಚರವಾದ ಶಕ್ತಿಯ ಪಾಲಿಗೆ ಒಪ್ಪಿಸಿ, ತಪ್ಪನ್ನು ಅಥವಾ ಅಪರಾಧವನ್ನು ಮಾಡಿರುವ ವ್ಯಕ್ತಿಗೆ ತಕ್ಕ ದಂಡನೆಯಾಗುವಂತೆ ಕೇಳಿಕೊಳ್ಳುತ್ತಾರೆ. ಜಗತ್ತಿನ ಉದ್ದಗಲದಲ್ಲಿರುವ ಎಲ್ಲಾ ಬಗೆಯ ಸಂಸ್ಕೃತಿಗಳಿಗೆ ಸೇರಿದ ಜನಸಮುದಾಯಗಳಲ್ಲಿ ಇಂತಹ ಆಚರಣೆಗಳು ಪ್ರಾಚೀನ ಕಾಲದಿಂದ ಇಂದಿನವರೆಗೂ ವಿವಿಧ ಪ್ರಮಾಣದಲ್ಲಿ ಬಳಕೆಯಲ್ಲಿವೆ.

ಕನ್ನಡ ಆಡುಮಾತಿನ ಸಮುದಾಯಕ್ಕೆ ಸೇರಿದ ವ್ಯಕ್ತಿಗಳ ಸಾಮಾಜಿಕ ವ್ಯವಹಾರದಲ್ಲಿ ಬಳಕೆಯಲ್ಲಿರುವ ಆಣೆ, ಪ್ರಮಾಣಗಳನ್ನು ಕುರಿತು ಭಾಷಿಕ, ಸಾಮಾಜಿಕ ನೆಲೆಗಳಲ್ಲಿ ವಿಶ್ಲೇಷಣೆ ಮಾಡುವುದು ಈ ಲೇಖನದ ಉದ್ದೇಶವಾಗಿದೆ.

ಕನ್ನಡ ಭಾಷಿಕರ ಸಾಮಾಜಿಕ ಸಂರಚನೆ

ಕರ್ನಾಟಕ ರಾಜ್ಯದಲ್ಲಿ ಹಿಂದು, ಜೈನ, ಬೌದ್ಧ, ಸಿಖ್, ಇಸ್ಲಾಂ, ಕ್ರೈಸ್ತ ಮತ್ತು ಇನ್ನಿತರ ಧರ್ಮಗಳ, ಅನೇಕ ಬುಡಕಟ್ಟಿನ ಜನರು ನೆಲೆಸಿದ್ದಾರೆ. ರಾಜ್ಯದ ಸುಮಾರು ಐದು ಕೋಟಿ ಜನಸಂಖ್ಯೆಯಲ್ಲಿ ಶೇ. 65ರಷ್ಟು ಮಂದಿ ಕನ್ನಡವನ್ನು ತಾಯ್ನುಡಿಯಾಗಿ ಹೊಂದಿದ್ದಾರೆ. ಕನ್ನಡ ಭಾಷಿಕರಲ್ಲಿ ಹೆಚ್ಚಿನ ಮಂದಿ ಹಿಂದುಗಳಾಗಿದ್ದಾರೆ. ಹಿಂದುಧರ್ಮವೆಂಬುದು ಹತ್ತಾರು ಬಗೆಯ ಜಾತಿ, ನೂರಾರು ಬಗೆಯ ಉಪಜಾತಿಗಳಿಂದ ಹೆಣೆದುಕೊಂಡಿದೆ. ಈ ಜಾತಿಗಳು, ಉಪಜಾತಿಗಳೆಲ್ಲವೂ ಶ್ರೇಣೀಕೃತವಾಗಿವೆ. ಜಾತಿ ಶ್ರೇಣಿಯ ಅತ್ಯಂತ ಕೆಳ ತುದಿಯಲ್ಲಿ ಮಾದಿಗರಿದ್ದರೆ, ಮೇಲಿನ ತುತ್ತತುದಿಯಲ್ಲಿ ಬ್ರಾಹ್ಮಣರಿದ್ದಾರೆ. ಇನ್ನುಳಿದ ಜಾತಿ, ಉಪ ಜಾತಿಯವರು ಒಬ್ಬರಿಗಿಂತ ಮತ್ತೊಬ್ಬರು ಮೇಲೆ ಅಥವಾ ಕೆಳಗೆ ಗುರುತಿಸಲ್ಪಟ್ಟಿದ್ದಾರೆ. ಇಂತಹ ಜಾತಿ ವ್ಯವಸ್ಥೆಯ ಕಾರಣದಿಂದ ಬ್ರಾಹ್ಮಣರಿಗೆ 'ಜಾತಿ ಶ್ರೇಷ್ಠತೆ'ಯ ಮೇಲರಿಮೆಯ ಭಾವವಿದ್ದರೆ, ಮಾದಿಗರಿಗೆ 'ಜಾತಿ ಹೀನತೆ'ಯ ಕೀಳರಿಮೆಯಿದೆ. ಜಾತಿ ಶ್ರೇಣಿಯ ಮಧ್ಯದ ಹಂತಗಳಲ್ಲಿರುವ ಇನ್ನುಳಿದವರಿಗೆ ಮೇಲರಿಮೆಯ ಮತ್ತು ಕೀಳರಿಮೆಯ ಭಾವನೆಗಳು ಏಕಕಾಲದಲ್ಲಿಯೇ ನೆಲೆಸಿವೆ. ಜಾತಿ ವ್ಯವಸ್ಥೆಯು ಹಿಂದು ಸಮಾಜವನ್ನು ಬ್ರಾಹ್ಮಣರು, ಶೂದ್ರರು ಮತ್ತು ಪರಿಶಿಷ್ಟ ಜಾತಿ ಹಾಗೂ ವರ್ಗಗಳೆಂಬ ಮೂರು ಪ್ರಧಾನ ಹಂತಗಳಲ್ಲೂ ಗುರುತಿಸುತ್ತಾರೆ.

ಜಾತಿಭೇದದ ಜತೆಗೆ ವರ್ಗಭೇದವೂ ಈ ಸಮುದಾಯದಲ್ಲಿದೆ. ಬಡವರು, ಮಧ್ಯಮ ಕೆಳವರ್ಗದವರು, ಮಧ್ಯಮ ವರ್ಗದವರು, ಮಧ್ಯಮ ಮೇಲುವರ್ಗದವರು ಮತ್ತು ಶ್ರೀಮಂತರೆಂಬ ವರ್ಗಭೇದಗಳಿವೆ. ಈ ಎರಡು ಭೇದಗಳ ಜತೆಗೆ ಲಿಂಗಭೇದವೂ ಪ್ರಮುಖವಾಗಿ ಕಂಡುಬರುತ್ತದೆ. ಸಮಾಜದ ಎಲ್ಲಾ ರಂಗಗಳಲ್ಲಿನ ಅಧಿಕಾರದ ಸ್ಥಾನಮಾನಗಳಲ್ಲಿ ಗಂಡಸರ ಪಾಲು ಹೆಚ್ಚಿನದಾಗಿದೆ. ಈ ರೀತಿ ಕನ್ನಡ ಭಾಷಿಕ ಸಮುದಾಯದವರು ಜಾತಿ, ವರ್ಗ, ಲಿಂಗ, ಭೇದಗಳುಳ್ಳ ಸಾಮಾಜಿಕ ಸಂರಚನೆಯಲ್ಲಿ ಬಾಳುತ್ತಿದ್ದಾರೆ. ಯಾವುದೇ

ಬಗೆಯ ಮಾತಿನ ಸಂದರ್ಭಗಳಲ್ಲಿ ಭಾಗವಹಿಸುವ ವ್ಯಕ್ತಿಗಳ ಸಾಮಾಜಿಕ ಹಿನ್ನೆಲೆಯು ಬಹು ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಆಣೆಯಿಡುವುದು ಎಂದರೇನು ?

ಯಾವುದೇ ವ್ಯಕ್ತಿ ತಾನು ಹೇಳುತ್ತಿರುವ ವಿಷಯ ನಿಜವಾದುದೆಂದು ಸಮರ್ಥಿಸಿಕೊಳ್ಳುವುದಕ್ಕಾಗಿ ದೈವಿಕ ಶಕ್ತಿಯನ್ನು, ವ್ಯಕ್ತಿಗಳನ್ನು, ವಸ್ತುಗಳನ್ನು, ತನ್ನ ದೇಹದ ಭಾಗಗಳನ್ನು ಸಾಕ್ಷಿಯನ್ನಾಗಿ ಹೆಸರಿಸುತ್ತಾ, ಆಡುವ ಮಾತುಗಳಿಗೆ ಆಣೆಯಿಡುವುದು ಎಂದು ಹೆಸರು.

'ಆಣೆ' ಎಂಬ ನಾಮಪದ, 'ಇಡು' ಎಂಬ ಕ್ರಿಯಾಪದದ ಜತೆಗೂಡಿ ಆಣೆಯಿಡುವುದು, ಆಣೆಯಿಕ್ಕುವುದು ಎಂಬ ರೂಪಗಳಲ್ಲಿ ಬಳಕೆಯಾಗುತ್ತಿದೆ. ಆಣೆಯಿಡುವ ಮಾತಿನ ಸಂದರ್ಭಗಳಲ್ಲಿ ವ್ಯಕ್ತಿಯು ತಾನು ಹೇಳುತ್ತಿರುವ ವಿಷಯ ನಿಜವಾದುದಾಗಿದೆ ಎಂಬುದಕ್ಕೆ ಸಾಕ್ಷಿಯನ್ನು ಹೆಸರಿಸುವಂತೆಯೇ, ಒಂದು ವೇಳೆ ತಾನು ವಂಚಿಸಲೆಂಬ ಉದ್ದೇಶದಿಂದ ಸತ್ಯವನ್ನು ಮರೆಮಾಚಿ, ಸುಳ್ಳನ್ನು ಹೇಳುತ್ತಿದ್ದರೆ, ತನಗೆ ತೀವ್ರವಾದ ಹಾನಿಯುಂಟಾಗಲೆಂದು ಶಾಪದ ನುಡಿಗಳನ್ನು ಒಂದು ಬಗೆಯ ಷರತ್ತಿನ ಹಿನ್ನೆಲೆಯಲ್ಲಿ ಕೆಲವೊಮ್ಮೆ ನುಡಿಯುತ್ತಾನೆ. ಇದು ಆತ್ಮಸಾಕ್ಷಿಗೆ ಅನುಗುಣವಾಗಿರುತ್ತದೆ.

ಪ್ರಮಾಣ ಮಾಡುವುದು ಎಂದರೇನು ?

ಯಾವುದೇ ವ್ಯಕ್ತಿ ತನ್ನ ಮೇಲೆ ಬಂದಿರುವ ಗುರುತರವಾದ ಆರೋಪವನ್ನು ನಿರಾಕರಿಸುವ, ತಾನು ಹೇಳುತ್ತಿರುವ ವಿಷಯ ಸತ್ಯವಾದುದೆಂದು ದೃಢೀಕರಿಸುವ, ತಾನು ಕೈಗೊಳ್ಳುತ್ತಿರುವ ಕಾರ್ಯವನ್ನು ನಿರ್ದಿಷ್ಟ ಅವಧಿಯೊಳಗೆ ಈಡೇರಿಸುವುದಾಗಿ ಪಣತೊಡುವ, ಇಲ್ಲವೇ ಭರವಸೆಯನ್ನು ನೀಡುವ, ಸಾಮಾಜಿಕ ಸನ್ನಿವೇಶಗಳಲ್ಲಿ ದೇವರ ಚಿತ್ರಪಟಗಳನ್ನು ಅಥವಾ ವಿಗ್ರಹಗಳನ್ನು, ವ್ಯಕ್ತಿಗಳನ್ನು, ಪ್ರಾಣಿಗಳನ್ನು ಅಥವಾ ತನ್ನ ದೇಹದ ಭಾಗಗಳನ್ನು ಕೈಗಳಿಂದ ಮುಟ್ಟಿ ಅಥವಾ ಹಿಡಿದುಕೊಂಡು ಆಡುವ ಮಾತಿನ ಕ್ರಿಯೆಗೆ ಪ್ರಮಾಣ ಮಾಡುವುದು ಎಂದು ಹೆಸರು. ಇದು ಪ್ರತ್ಯಕ್ಷ ಪ್ರಮಾಣದ ಕ್ರಿಯೆಯಾಗಿದೆ.

'ಪ್ರಮಾಣ' ಎಂಬ ನಾಮಪದ 'ಮಾಡು' ಎಂಬ ಕ್ರಿಯಾಪದದ ಜತೆಗೂಡಿ ಪ್ರಮಾಣಮಾಡುವುದು ಎಂಬ ರೂಪದಲ್ಲಿ ಬಳಕೆಯಾಗುತ್ತಿದೆ.

ಪ್ರಮಾಣ ಮಾಡುವುದು ಕ್ರಮಬದ್ಧವಾದ ಹಾಗೂ ನಿರ್ದಿಷ್ಟವಾದ ಸಾಂಸ್ಕೃತಿಕ ಆಚರಣೆಯಾಗಿರುತ್ತದೆ. ಇದರಲ್ಲಿ ಧಾರ್ಮಿಕ ಅಂಶವೂ ಸೇರಿರುತ್ತದೆ. ಆಣೆಯಿಡುವುದಕ್ಕೂ ಪ್ರಮಾಣ ಮಾಡುವುದಕ್ಕೂ ಇರುವ ಪ್ರಮುಖ ವ್ಯತ್ಯಾಸವೇನೆಂದರೆ, ಆಣೆಯು ಕೇವಲ ಮಾತಿನ ರೂಪದಲ್ಲಿ ಪ್ರಕಟಗೊಂಡರೆ, ಪ್ರಮಾಣವು ಮಾತಿನ ಜತೆಯಲ್ಲೇ ಒಂದು ಕ್ರಿಯೆಯನ್ನು ಒಳಗೊಂಡಿರುತ್ತದೆ. ಸಾಮಾನ್ಯವಾಗಿ ಯಾರ ಮನೆಯಲ್ಲಾದರೂ ನಡೆಯಬಹುದಾದ ಒಂದು ಉದಾಹರಣೆ :

ಪ್ರಸಂಗ 1

ಮನೆಯಲ್ಲಿ ಮೇಜಿನ ಮೇಲೆ ಇಟ್ಟಿದ್ದ ಇನ್ನೂರು ರೂಪಾಯಿ ಕಾಣೆಯಾದುದರ ಬಗ್ಗೆ ಹದಿನೆಂಟರ ವಯಸ್ಸಿನ ಗಂಡಾಳನ್ನು ಮನೆಯ ಯಜಮಾನ (ವಯಸ್ಸು 50) ಮತ್ತು ಯಜಮಾನಿ (ವಯಸ್ಸು 40) ಜತೆಗೂಡಿ ಪ್ರಶ್ನಿಸುತ್ತಿರುವ ಮಾತಿನ ಸಂದರ್ಭ ಹೀಗಿದೆ :

ಯಜಮಾನ : ಲೋ, ನಿಜ ಬೊಗಳು. ತಗೊಂಡಿದ್ರೆ ಕೊಟ್ಬುಡು.

ಆಳು : ನನ್ ತಾಯಾಣೆಗೂ ತಕೊಂಡಿಲ್ಲ ಕಣಪ್ಪ. ದೇವರಾಣೆಗೂ ನಾ ಕಾಣೆ, ಅದೆಲ್ಲಿತ್ತೊ ನಂಗೊತ್ತಿಲ್ಲ.

ಯಜಮಾನಿ : ನಿಂಗೆ ಗೊತ್ತಿಲ್ದೆ ಏನ್ಲ ? ನೀನೊಬ್ನೆ ಅಲ್ವೆ ಮನೇಲಿದ್ದೋನು! ಇನ್ಯಾರು ಬಂದಿದ್ರು ಒಳಕ್ಕೆ?

ಆಳು : ಇದೇನವ್ವ ಹೀಗಂತೀರಿ! ಯಾವತ್ತಾದ್ರೂ ನಾನು ಹಂಗೆ ಮಾಡಿದ್ನ? ನನ್ ಕಣ್ಣಾಣೆಗೂ ಇಲ್ಲ ಕಣ್ರವ್ವ. ಭೂಮ್ತಾಯಿ ಆಣೆಗೂ ನಾ ದುಡ್ಡ ಕಾಣೆ ಕಣ್ರವ್ವ.

ಯಜಮಾನ : ಲೋ, ನೀ ಆಣೆ-ಗೀಣೆ ಇಕ್ಬೇಡ. ನಿಜ ಹೇಳು ಎಲ್ಲಿಟ್ಟಿದ್ದೀಯೆ? (ಅವನಿಗೆ ಹೊಡೆಯಲೆಂದು ಮುನ್ನುಗ್ಗುತ್ತಾನೆ)

ಯಜಮಾನಿ : (ಅಡ್ಡ ಬಂದು ತಡೆಯುತ್ತಾ) ಹೊಡಿಗಿಡಿ ಬ್ಯಾಡಿ. ಎಲ್ಲಾದ್ರೂ ಅಸವಲ್ಲದ ಜಾಗಕ್ಕೆ ಏಟು ಬಿದ್ದು ಇನ್ನೇನಾದ್ರೂ ಆದದು! ಸುಮ್ನೆ ಒಳ್ಳೆ ಮಾತ್ನಲ್ಲೆ ಕೇಳಿ.

ಆಳು : ಸತ್ಯವಾಗ್ಲು ನಾ ಎತ್ಕೊಂಡಿಲ್ಲ ಕಣ್ರಪ್ಪ. ಯಾವ ದೇವರ ಮುಂದೆ ಬೇಕಾದ್ರು ಪ್ರಮಾಣಮಾಡ್ತೀನಿ. ಆ ಪಟಲದವ್ವನಾಣೆಗೂ ನಾ ಕಳ್ಳ ಅಲ್ಲ ಕಣ್ರಪ್ಪ

ಯಜಮಾನಿ : ಹಂಗಾದ್ರೆ ಪಟಲದವ್ವನ ಗುಡಿ ಮುಂದೆ ನಿಂತ್ಕೊಂಡು ಪ್ರಮಾಣ ಮಾಡ್ತೀಯ ?

ಆಳು : ಆಗ್ಲಿ ಕಣ್ರವ್ವ. ಈಗ್ಲೆ ನಡೀರಿ ಬೇಕಾದ್ರೆ.

ಯಜಮಾನ : ಪಟಲದವ್ವನ ಗುಡೀನುಬೇಡ, ಏನೂ ಬೇಡ. ಇಲ್ಲೇ ನಮ್ಮ ಕೊಟ್ಗೇಲಿ ಬಸವಣ್ಣ ದೇವರ ಬಾಲ ಹಿಡ್ಕೊಂಡು ಪ್ರಮಾಣ ಮಾಡ್ಲಡಿ.

ಆಳು : ಹಂಗೆ ಆಗ್ಲಿ ಕಣ್ರಪ್ಪ. ನಡೀರಿ. (ಅವರೊಡನೆ ಕೊಟ್ಟಿಗೆಗೆ ಬಂದು, ಅಲ್ಲಿದ್ದ ಒಂದು ಹಸುವಿನ ಬಾಲವನ್ನು ಕೈಯಲ್ಲಿ ಹಿಡಿದುಕೊಂಡು) ಈ ಬಸವಣ್ಣ ದೇವರಾಣೆಗೂ ನಾನು ಅಲ್ಲಿದ್ದ ದುಡ್ಡು ತಕೊಂಡಿಲ್ಲ. ನಾನು ಆ ದುಡ್ಡ ಕಾಣೂಕೆ ಕಾಣೆ. ನಾನೇನಾದ್ರೂ ದುಡ್ಡ ಎತ್ಕೊಂಡು ಸುಳ್ಳು ಹೇಳ್ತಿದ್ರೆ, ನನ್ ಕಣ್ ಹಿಂಗೋಗ್ಲಿ, ನನ್ ನಾಲ್ಗೆ ಸೇದೋಗ್ಲಿ, ನಂಗೆ ಬರಬಾರದ್ದು ಬರ್‍ಲಿ.

ಯಜಮಾನಿ : (ಗಂಡನನ್ನು ಕುರಿತು) ಆ ದೇವರೇ ನೋಡ್ಕೊತನೆ ಬುಡಿ. ಇನ್ನೇನು ತಾನೆ ನಾವು ಮಾಡೂಕಾದದು? ನಡೀರಿ. (ಅವರಿಬ್ಬರೂ ಮನೆಯೊಳಕ್ಕೆ ಹೋಗುತ್ತಾರೆ. ಮೂಕವೇದನೆಯನ್ನು ಅನುಭವಿಸುತ್ತಾ, ಆಳು ಅಲ್ಲೇ ನಿಂತಿರುತ್ತಾನೆ).

ಆಣೆಯ ಬಗೆಗಳು

ಆಣೆಯನ್ನು ಇಡುವಾಗ ಸಾಕ್ಷಿಯಾಗಿ ಅಥವಾ ಆಧಾರವಾಗಿ ಹೆಸರಿಸಲು ಆಯ್ಕೆಗೊಂಡಿರುವ ವಿಷಯಕ್ಕೆ ಅನುಗುಣವಾಗಿ, ಆಣೆಗಳಲ್ಲಿ ಪ್ರಮುಖವಾಗಿ ನಾಲ್ಕು ಬಗೆಗಳನ್ನು ಗುರುತಿಸಬಹುದು :

1) ದೈವ ಸಂಬಂಧಿ ಆಣೆಗಳು :

ದೈವದ ಬಗೆಗಿನ ಭಕ್ತಿ ಮತ್ತು ನಂಬಿಕೆಯು ಜನರಲ್ಲಿ ಹೆಚ್ಚಾದಂತೆಲ್ಲಾ ದೇವರನ್ನು ಪೂಜಿಸಿ, ತಮ್ಮ ಜೀವನದ ಆಗುಹೋಗುಗಳನ್ನು ದೈವದ ನಿರ್ಧಾರಕ್ಕೆ ಬಿಡುವ ಪರಿಪಾಠ ಹಲವರಲ್ಲಿ ಬಂದಿತು. ನಿಜವಾದ ತಪ್ಪಿತಸ್ಥ ಅಥವಾ ಅಪರಾಧಿಯು ಯಾರೆಂಬುದನ್ನು ಗುರುತಿಸಲು ಸಾಧ್ಯವಿಲ್ಲದಿದ್ದಾಗ, ಇದರ ಜವಾಬ್ದಾರಿಯನ್ನು ದೇವರಿಗೆ ವಹಿಸಿ, ವ್ಯಾಜ್ಯದ ಸಂದರ್ಭದಲ್ಲಿ ಆರೋಪಕ್ಕೆ ಗುರಿಯಾದ ವ್ಯಕ್ತಿಯು ನಿರಪರಾಧಿಯಾಗಿದ್ದಲ್ಲಿ ಅವನನ್ನು ಕಾಪಾಡುವ, ಅಪರಾಧಿಯಾಗಿದ್ದಲ್ಲಿ ದಂಡಿಸುವ ಹೊಣೆಯನ್ನು ದೇವರ ಪಾಲಿಗೆ ನೀಡಿಲಾಯಿತು. ದೇವರ ಹೆಸರಿನಲ್ಲಿ ಸುಳ್ಳನ್ನು ನುಡಿದರೆ, ಅದಕ್ಕೆ ತೀವ್ರವಾದ ಶಿಕ್ಷೆಯು ಇಂದಲ್ಲ ನಾಳೆಯಾದರೂ ಆಗಿಯೇ ತೀರುತ್ತದೆಯೆಂಬ ದೃಢವಾದ ನಂಬಿಕೆಯಿಂದ ಆಣೆಯಿಡುವ ಇಂತಹ ಪದ್ಧತಿಯು ಬೆಳೆದು ಬಂದಿದೆ.

ಆಣೆಯಿಡುವ ವ್ಯಕ್ತಿಗಳು ತಮ್ಮ ಕುಲದೇವರನ್ನು, ತಾವು ಬಹಳ ಭಯ-ಭಕ್ತಿಗಳಿಂದ ಪೂಜಿಸುವ ಮತ್ತು ನಂಬುವ ದೇವರನ್ನು ಸಾಕ್ಷಿಯಾಗಿ ಹೆಸರಿಸುತ್ತಾರೆ.

ಇದರಲ್ಲಿ ಶಿಷ್ಟ ದೇವತೆಗಳ, ಗ್ರಾಮ ದೇವತೆಗಳ ಮತ್ತು ಸ್ಥಳೀಯವಾಗಿ ಪೂಜಿಸುವ ದೇವರ ಹೆಸರುಗಳು ಬಳಕೆಯಾಗುತ್ತವೆ.

ಉದಾಹರಣೆ :

ತಿರುಪತಿ ತಿಮ್ಮಪ್ಪನಾಣೆಗೂ ....

ಧರ್ಮಸ್ಥಳದ ಮಂಜುನಾಥನ ಆಣೆಯಾಗು ....

ಮಾರಮ್ಮನಾಣೆಗೂ ....

ಅಯ್ಯಪ್ಪಸ್ವಾಮಿ ಆಣೆಗೂ ....

ಲಕ್ಷ್ಮಿಯಾಣೆಯಾಗೂ ....

ಚೌಡಮ್ಮನಾಣೆಗೂ ....

2. ವ್ಯಕ್ತಿ ಸಂಬಂಧಿ ಆಣೆಗಳು :

ಯಾವುದೇ ವ್ಯಕ್ತಿ ತಾನು ಬಹಳವಾಗಿ ಪ್ರೀತಿಸುವ, ಗೌರವಿಸುವ ಮತ್ತು ಅವಲಂಬಿಸಿರುವ ವ್ಯಕ್ತಿಗಳ ಹೆಸರಿನಲ್ಲಿ ಆಣೆಯನ್ನು ಇಡುವಾಗ, ಸುಳ್ಳನ್ನು ಆಡಿದರೆ ಅದರಿಂದ ಅವರಿಗೆ ಮುಂದೆ ಸಾವು-ನೋವುಗಳುಂಟಾಗಿ, ಅವರನ್ನು ಶಾಶ್ವತವಾಗಿ ಕಳೆದುಕೊಳ್ಳುತ್ತಾನೆ ಎಂಬ ಒಂದು ನಂಬಿಕೆಯು ಜನಮನದಲ್ಲಿ ಆಳವಾಗಿ ಬೇರೂರಿದೆ. ಆದುದರಿಂದಲೇ ಬಹುತೇಕ ಮಂದಿ ತಾವು ಆಡುತ್ತಿರುವ ಮಾತುಗಳು ಸತ್ಯವಾದುವು ಎಂಬುದನ್ನು ದೃಢೀಕರಿಸುವುದಕ್ಕಾಗಿ ವ್ಯಕ್ತಿಗಳ ಮೇಲೆ ಆಣೆಯಿಡುತ್ತಾರೆ.

ತಮ್ಮ ಹುಟ್ಟಿಗೆ ಕಾರಣಕರ್ತರಾದ ತಂದೆ-ತಾಯಿಯರ ಮೇಲೆ ಆಣೆಯಿಡುತ್ತಾರೆ. ತಂದೆಗಿಂತ ತಾಯಿಯ ಮೇಲೆ ಇಡುವ ಆಣೆಯ ಪ್ರಮಾಣ ಹೆಚ್ಚಾಗಿರುತ್ತದೆ. ಏಕೆಂದರೆ ತಂದೆಗಿಂತ ತಾಯಿಯು ಹೆಚ್ಚು ಹತ್ತಿರದವಳು ಮತ್ತು ಅಮೂಲ್ಯ ವ್ಯಕ್ತಿಯೆಂಬ ಭಾವನೆಯು ಜನಸಮುದಾಯದಲ್ಲಿದೆ. ತಮ್ಮ ವಂಶದ ಕುಡಿಗಳಾದ ಮಕ್ಕಳ ಮೇಲೆ ಆಣೆಯಿಡುತ್ತಾರೆ. ಅತಿ ಹೆಚ್ಚಿನ ಸಂದರ್ಭಗಳಲ್ಲಿ ನನ್ನಾಣೆಗೂ ಎಂದು ತಮ್ಮ ಮೇಲೆ ಆಣೆ ಇಟ್ಟುಕೊಳ್ಳುತ್ತಾರೆ. ವಿದ್ಯೆಯನ್ನು ಹೇಳಿಕೊಟ್ಟ ಗುರುಗಳ, ತಮ್ಮ ತಮ್ಮ ಜಾತಿಯ ಮಠಾಧಿಪತಿಗಳ ಹೆಸರುಗಳು ಕೂಡ ಆಣೆಯಲ್ಲಿ ಪ್ರಸ್ತಾಪಗೊಳ್ಳುತ್ತವೆ. ಕೆಲವು ಸಂದರ್ಭಗಳಲ್ಲಿ ಆರೋಪವನ್ನು ಹೊರಿಸಿದ ವ್ಯಕ್ತಿಯೇ ತನ್ನ ಪಾಲಿಗೆ ಆತ್ಮೀಯರು ಅಥವಾ ಗೌರವಾನ್ವಿತರು ಎನಿಸಿದ್ದರೆ, ಅವರನ್ನೇ ಕುರಿತು ನಿಮ್ಮಾಣೆಗೂ ಎಂದು ಆಣೆ ಮಾಡುವುದು ಕಂಡು ಬರುತ್ತದೆ.

ಉದಾಹರಣೆಗೆ :

ನಮ್ ತಂದೆತಾಯಿ ಆಣೆಗೂ ....

ನನ್ ತಾಯಾಣೆಗೂ ....

ನಮ್ಮಪ್ಪನಾಣೆಗೂ ....

ನಂಗೆ ಇರೋ ಒಬ್ಬ ಮಗನ ಆಣೆಗೂ ....

ನನ್ ಗಂಡನಾಣೆಗೂ ....

ನಮ್ ಗುರುಗಳಾಣೆಗೂ ....

ಚುಂಚನಗಿರಿ ಸ್ವಾಮಿಗಳಾಣೆಗೂ ....

3. ವಸ್ತು ಸಂಬಂಧಿ ಆಣೆಗಳು :

ಜೀವದ ಉಳಿವಿಗೆ ಅತ್ಯಗತ್ಯವಾದ ಅನ್ನ, ನೀರು, ಉಪ್ಪು ಮುಂತಾದ ಪದಾರ್ಥಗಳಿಂದ ಪ್ರಾರಂಭಗೊಂಡು, ಸಂಸ್ಕೃತಿಯ ದೃಷ್ಟಿಯಿಂದ ಪವಿತ್ರವೆಂದು ಭಾವಿಸಿರುವ ಅರಿಸಿನ-ಕುಂಕುಮ, ಮಾಂಗಲ್ಯ, ಪುಸ್ತಕ, ತೆಂಗಿನಮರ, ಹೊಳೆ-ನದಿಗಳು, ಸೂರ್ಯ, ದೀಪ, ಬೆಂಕಿ ಮುಂತಾದ ಅನೇಕ ವಸ್ತುಗಳನ್ನು ಹೆಸರಿಸಿ ಆಣೆ ಇಡುತ್ತಾರೆ.

ಜನ ಸಮುದಾಯದ ಸಾಮಾಜಿಕ ಜೀವನದಲ್ಲಿ ಬಹು ಮುಖ್ಯವಾದುದೆಂದು, ಧಾರ್ಮಿಕ ನೆಲೆಯಲ್ಲಿ ಪವಿತ್ರವೆಂದು ಭಾವಿಸಿರುವ ವಸ್ತುಗಳನ್ನು ಹೆಸರಿಸಿ ಆಣೆಯಿಡುವಾಗ ಸುಳ್ಳನ್ನಾಡಿದರೆ, ಅಂತಹ ವಸ್ತುಗಳನ್ನು ಪಡೆದು ಸುಖಿಸುವ ಭಾಗ್ಯದಿಂದ ವಂಚಿತರಾಗಿ, ತೀವ್ರವಾದ ಸಂಕಷ್ಟಗಳಿಗೆ ಗುರಿಯಾಗಿ ನರಳಬೇಕಾಗುವುದೆಂಬ ನಂಬಿಕೆಯು ಸಾಕಷ್ಟು ಮಂದಿಯ ಮನದಲ್ಲಿದೆ. ಇವು ಜನಪದ ಸಮೂಹದಲ್ಲಿ ಎಷ್ಟೋ ವರ್ಷಗಳಿಂದ ರೂಢಿಯಲ್ಲಿದ್ದು ಮುಂದುವರಿಯುತ್ತಿರುತ್ತಿರುವ ನಂಬಿಕೆಗಳಾಗಿವೆ.

ಉದಾಹರಣೆಗೆ :

ನಾನು ತಿನ್ನು ಅನ್ನದ ಮೇಲಾಣೆ ....
ನನ್ನ ಮಾಂಗಲ್ಯದಾಣೆಗೂ ....
ಭೂಮ್ತಾಯಿ ಆಣೆಗೂ ....
ಅರಿಸಿನ ಕುಂಕುಮದಾಣೆಗೂ ....
ಹರಿಯುತ್ತಿರುವ ಗಂಗಮ್ಮನಾಣೆಗೂ ....
ಉರಿಯುತ್ತಿರುವ ಜ್ಯೋತಿಯಾಣೆಗೂ ....
ಅಗ್ನಿ ಸಾಕ್ಷಿಯಾಗು ....

4. ದೇಹದ ಅಂಗಾಂಗ ಸಂಬಂಧಿ ಆಣೆಗಳು :

ದೇಹದ ಭಾಗಗಳನ್ನು ಕುರಿತು ಆಣೆಯನ್ನಿಡುವಾಗ ಕಣ್ಣುಗಳನ್ನು ಮಾತ್ರ ನೇರವಾಗಿ ಹೆಸರಿಸುತ್ತಾರೆ. ಈ ಬಗೆಯ ಆಣೆಗಳ ಪ್ರಾರಂಭದಲ್ಲಿ ತಮ್ಮ ನಿಲುವನ್ನು ದೃಢೀಕರಿಸುತ್ತಾ, ಅದು ಸುಳ್ಳಾಗಿದ್ದರೆ, ಅಂತಹ ವಂಚನೆಯ ಕಾರ್ಯದಲ್ಲಿ ತೊಡಗಿದ ತಮ್ಮ ದೇಹದ ಭಾಗಗಳು ನಾಶವಾಗಲೆಂಬ ಶಾಪದ ಷರತ್ತನ್ನು ತಮಗೆ

ತಾವೇ ವಿಧಿಸಿಕೊಳ್ಳುತ್ತಾರೆ. ಇಲ್ಲಿ ಸ್ವದಂಡನೆ ಪ್ರಧಾನವಾಗಿರುತ್ತದೆ.

ಉದಾಹರಣೆಗೆ :

ನನ್ ಕಣ್ಣಾಣೆಗೂ ಕಂಡಿಲ್ಲ. ಹಂಗೇನಾದ್ರೂ ಕಂಡಿದ್ರೆ, ನನ್ ಕಣ್ ಹಿಂಗೋಗ್ಲಿ.

ನಾನು ಹಂಗೆ ಹೇಳಿಲ್ಲ, ಹಂಗೇನಾದ್ರೂ ಹೇಳಿದ್ರೆ, ನನ್ ಬಾಯ್ಲಿ ಹುಳ ಬೀಳಲಿ.

ನಾನು ಯಾರ್ಗೂ ಕೊಟ್ಟಿಲ್ಲ. ಹಂಗೇನಾದ್ರೂ ಕೊಟ್ಟಿದ್ರೆ, ನನ್ ಕೈ ಸೇದೋಗ್ಲಿ.

ಆಣೆಯ ಭಾಷಿಕ ರಚನೆಯ ಲಕ್ಷಣಗಳು

ಮಾತಿನ ಸಂದರ್ಭಗಳಲ್ಲಿ ಬಳಕೆಯಾಗುವ ಆಣೆಯ ಭಾಷಿಕ ರಚನೆಗಳು ಒಂದು ಕ್ರಮಬದ್ಧವಾದ ಬಂಧದಲ್ಲಿ ಜತೆಗೂಡಿರುವ ವಾಕ್ಯಗಳಾಗಿರುತ್ತವೆ. ಪ್ರತಿಯೊಂದು ಆಣೆಯಲ್ಲೂ ಸಾಮಾನ್ಯವಾಗಿ ಮೂರು ಘಟಕಗಳಿರುತ್ತವೆ. ಈ ಘಟಕಗಳಲ್ಲಿ ಬರುವ ಪದಗಳ ಅರ್ಥಕ್ಕೆ ಅನುಗುಣವಾಗಿ ಆಣೆಯಿಡುವಾಗ ಬಳಕೆಯಾಗುವ ವಾಕ್ಯಗಳ ರಾಚನಿಕ ಲಕ್ಷಣಗಳನ್ನು ವಿಶ್ಲೇಷಿಸಬಹುದು. ಇಲ್ಲಿನ ಭಾಷಿಕ ಕ್ರಿಯೆ ಆಶ್ಚರ್ಯ ಹುಟ್ಟಿಸುತ್ತದೆ.

ಅ)	1	2	3
	ನನ್ ತಾಯಾಣೆಗೂ	(ನಾನು)	ಮಾಡ್ಲಿಲ್ಲ.
	ನನ್ ಮಾಂಗಲ್ಯದಾಣೆಗೂ	(ನಾನು)	ಹಂಗನ್ನಲಿಲ್ಲ.
	ತಿರುಪತಿ ತಿಮ್ಮಪ್ಪನಾಣೆಗೂ	(ನಾನು)	ಕದ್ದಿಲ್ಲ.
	ನನ್ ಕಣ್ಣಾಣೆಗೂ	(ನಾನು)	ನೋಡ್ಲಿಲ್ಲ.
	ನಿಮ್ಮಾಣೆಗೂ	(ನಾನು)	ಹೋಗ್ಲಿಲ್ಲ.

ಘಟಕ 1 ರಲ್ಲಿ ಆಣೆಯಿಡುತ್ತಿರುವ ವ್ಯಕ್ತಿಯು ತನಗೆ ಸಂಬಂಧವಿರುವ ವ್ಯಕ್ತಿ, ವಸ್ತು, ದೈವ ಮತ್ತು ದೇಹದ ಅಂಗಗಳನ್ನು ಸಾಕ್ಷಿಯಾಗಿ ಹೆಸರಿಸುತ್ತಿರುವ ನಾಮಪದಗಳಿವೆ.

ಘಟಕ 2ರಲ್ಲಿ ಆಣೆಯಿಡುತ್ತಿರುವ ವ್ಯಕ್ತಿಯನ್ನು ಸೂಚಿಸುವ 'ನಾನು' ಎಂಬ ಸರ್ವನಾಮ ಪ್ರಯೋಗಗೊಳ್ಳದಿದ್ದರೂ ಅಧ್ಯಾಹಾರವಾಗಿ ಗ್ರಹಿಕೆಯಾಗುತ್ತದೆ.

ಘಟಕ 3ರಲ್ಲಿ ತನ್ನ ಮೇಲೆ ಬಂದಿರುವ ಆರೋಪವನ್ನು ನಿರಾಕರಿಸುವ ನಿಷೇಧಾರ್ಥಕ ಕ್ರಿಯಾಪದಗಳಿವೆ.

ಆ)

1	2	3
ತಿರುಪತಿ ತಿಮ್ಮಪ್ಪನಾಣೆಗೂ ಕದ್ದಿಲ್ಲ	ಹಂಗೇನಾದ್ರೂ ನಾನ್ ಕದ್ದಿದ್ರೆ,	ನಂಗೆ ಬರಬಾರದ್ದು ಬರ್ಲಿ
ನನ್ ಮಾಂಗಲ್ಯದಾಣೆಗೂ ಹಂಗನ್ನಲಿಲ್ಲ	ಹಂಗೇನಾದ್ರೂ ಅಂದಿದ್ರೆ,	ನನ್ ಬಾಯ್ಗೆ ಮಣ್ಣ್ಬೀಳಲಿ.
ನನ್ ಕಣ್ಣಾಣೆಗೂ ನೋಡಲಿಲ್ಲ,	ಹಂಗೇನಾದ್ರೂ ನೋಡಿದ್ರೆ,	ನನ್ ಕಣ್ ಹಿಂಗೋಗ್ಲಿ.

ಶಾಪದ ಷರತ್ತಿನೊಡನೆ ಬಳಕೆಯಾಗುವ ಆಣೆಗಳಲ್ಲಿ ಪ್ರಮುಖವಾದ ಆಣೆಯ ವಾಕ್ಯದ ಜೊತೆಗೆ, ಪರಸ್ಪರ ಪೂರಕವಾದ ಜೋಡಿ ವಾಕ್ಯಗಳು ಬಳಕೆಯಾಗುತ್ತವೆ.

ಘಟಕ 1 ರಲ್ಲಿ ಆಣೆಯು ಯಾವುದೆಂಬುದನ್ನು ಸೂಚಿಸುವ ವಾಕ್ಯವಿದೆ.

ಘಟಕ 2 ರಲ್ಲಿ ತನ್ನ ಮೇಲೆ ಹೊರಿಸಿರುವ ಆರೋಪ ನಿಜವಾಗಿದ್ದರೆ ಎಂಬ ಸಂಭಾವ್ಯತೆಯನ್ನು ಸೂಚಿಸಲಾಗಿದೆ.

ಘಟಕ 3 ರಲ್ಲಿ ವಂಚಿಸುವ ಉದ್ದೇಶಕ್ಕಾಗಿ ಸುಳ್ಳು ಆಣೆಯನ್ನು ಇಟ್ಟದ್ದಕ್ಕಾಗಿ, ಭವಿಷ್ಯದಲ್ಲಿ ಅತ್ಯಂತ ತೀವ್ರವಾದ ದಂಡನೆಯು ತನಗೆ ಉಂಟಾಗಲಿ ಎಂಬ ಆಶಯವುಳ್ಳ ಶಾಪದ ಷರತ್ತನ್ನು ವಿಧಿಸಿಕೊಳ್ಳಲಾಗಿದೆ.

ಇ)

1	2	3	4
ದೇವರಾಣೆಗೂ	(ನಾನು)	ನಿಮಗೇ ಓಟು	ಹಾಕ್ತೀನಿ.
ನಿಮ್ಮಾಣೆಗೂ	(ನಾನು)	ಅವತ್ತು ಬಂದೇ	ಬರ್ತೀನಿ.

ಉದ್ದೇಶಿತ ಕೆಲಸವೊಂದನ್ನು ಮಾಡುವ ಭರವಸೆಯನ್ನು ನೀಡುವ ಮಾತಿನ ಸಂದರ್ಭಗಳಲ್ಲಿ ಬಳಕೆಯಾಗುವ ಆಣೆಗಳ ರಾಚನಿಕ ಸ್ವರೂಪದಲ್ಲಿ ನಾಲ್ಕು ಘಟಕಗಳು ಕಂಡುಬರುತ್ತವೆ.

ಘಟಕ 3ರಲ್ಲಿ ಮಾಡಲಿರುವ ಕಾರ್ಯವನ್ನು ಸೂಚಿಸಲಾಗಿದೆ.

ಘಟಕ 4 ರಲ್ಲಿ ವಿಧ್ಯರ್ಥಕ ಕ್ರಿಯಾಪದ ಬಳಕೆಯಾಗಿದೆ.

ಈ)

1	2	3	4
ನನ್ ಮಕ್ಕಳಾಣೆಗೂ	(ನಾನು)	ಇವತ್ತಿನಿಂದ	ಕುಡಿಯೋದಿಲ್ಲ
ದೇವರಾಣೆಗೂ	(ನಾನು)	ಇನ್ನೊಂದು ಸತಿ	ಕದಿಯೋದಿಲ್ಲ

ಕೆಟ್ಟ ಕೆಲಸವನ್ನು ಮಾಡದಿರುವ ಅಥವಾ ದುಶ್ಚಟಗಳನ್ನು ತೊರೆಯುವ ನಿರ್ಧಾರಗಳನ್ನು ಕೈಗೊಳ್ಳುವಾಗ ಬಳಸುವ ಆಣೆಗಳ ರಾಚನಿಕ ಸ್ವರೂಪದಲ್ಲೂ ನಾಲ್ಕು ಘಟಕಗಳು ಕಂಡುಬರುತ್ತವೆ.

ಘಟಕ 3 ರಲ್ಲಿ ಕಾಲವನ್ನು ಅಥವಾ ಸರದಿಯನ್ನು ಸೂಚಿಸಲಾಗಿದೆ.

ಘಟಕ 4 ರಲ್ಲಿ ನಿಷೇಧಾರ್ಥಕ ಪದ ಬಳಕೆಯಾಗಿದೆ.

ಪ್ರಮಾಣ ಮಾಡುವ ಆಚರಣೆಯ ನಾನಾ ವಿಧಗಳು

ಯಾವುದೇ ಬಗೆಯ ವ್ಯಾಜ್ಯ ಉಂಟಾದ ಸಂದರ್ಭದ ಅಂತಿಮ ಘಟ್ಟದಲ್ಲಿ ಪ್ರಮಾಣ ಮಾಡುವ ಆಚರಣೆಯು ನಡೆಯುತ್ತದೆ. ಒಬ್ಬನು ಆರೋಪವನ್ನು ಹೊರಿಸುತ್ತಿದ್ದು ಆರೋಪಕ್ಕೆ ಗುರಿಯಾದ ಮತ್ತೊಬ್ಬನು ಅದನ್ನು ನಿರಾಕರಿಸುತ್ತಿದ್ದಾಗ, ಇಂತಹ ಸಂದರ್ಭದಲ್ಲಿ ಆಡುತ್ತಿರುವ ಇಬ್ಬರ ಮಾತುಗಳಿಗೂ ಯಾವುದೇ ರೀತಿಯ ಸಾಕ್ಷ್ಯವಾಗಲಿ ಅಥವಾ ಆಧಾರಗಳಾಗಲಿ ಇಲ್ಲದಿರುವಾಗ, ಕಟ್ಟಕಡೆಯದಾಗಿ ಆರೋಪಿಯ ಪಾಲಿಗೆ ಪ್ರಮಾಣಮಾಡಲೇಬೇಕಾದ ಸನ್ನಿವೇಶ ಉಂಟಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಆರೋಪಿಯು ತಾನಾಗಿಯೇ ಯಾವುದೇ ಬಗೆಯ ಪ್ರಮಾಣ ಮಾಡುವುದಕ್ಕೆ ಸಿದ್ಧನಿರುವುದಾಗಿ ಹೇಳುತ್ತಾನೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಆರೋಪ ಹೊರಿಸಿದವರು ಪ್ರಮಾಣ ಮಾಡುವಂತೆ ಆರೋಪಿಗೆ ಸವಾಲು ಹಾಕುತ್ತಾರೆ. ಪ್ರಮಾಣ ಮಾಡುವ ಆಚರಣೆಯು ನಡೆಯತೊಡಗಿದಾಗ, ವ್ಯಾಜ್ಯದಲ್ಲಿ ನೇರವಾಗಿ ಭಾಗಿಗಳಾದವರಲ್ಲದೇ, ಇತರರು ಇರುವ ಸಂಭವವಿರುತ್ತದೆ. ಗುರುತರವಾದ ಆಪಾದನೆಗಳಿಗೆ ವ್ಯಕ್ತಿಯು ಗುರಿಯಾದ ಪ್ರಸಂಗಗಳಲ್ಲಿ ಸಾರ್ವಜನಿಕವಾಗಿ ಊರಿನ ಗುಡಿ ಅಥವಾ ಚಾವಡಿಯ ಮುಂದೆ

ಊರಿನ ಮುಖಂಡರು ಅಥವಾ ಆಯಾಯ ಜಾತಿ ಇಲ್ಲವೇ ಕುಲದ ಹಿರಿಯರಿಂದ ವಿಚಾರಣೆ ನಡೆದು, ವ್ಯಾಜ್ಯ ಬಗೆಹರಿಯದಿದ್ದಾಗ, ಅಲ್ಲಿ ನೆರೆದವರೆಲ್ಲರ ಮುಂದೆ ಪ್ರಮಾಣ ಮಾಡುವಂತೆ ಆರೋಪಿಗೆ ನ್ಯಾಯಸ್ಥರು ಆದೇಶವನ್ನು ನೀಡುತ್ತಾರೆ. ಪ್ರಮಾಣ ಮಾಡುವ ರೀತಿ ಇಂತಹುದೇ ಆಗಿರಬೇಕು ಎಂಬುದನ್ನು ಸಭೆಯಲ್ಲಿನ ನ್ಯಾಯಸ್ಥರು ನಿರ್ಧರಿಸುತ್ತಾರೆ. ಕೆಲವೊಮ್ಮೆ ಆರೋಪಿಯ ಅಥವಾ ಆರೋಪಿಸಿದವರ ಆಯ್ಕೆಗೂ ಬಿಡಲಾಗುತ್ತದೆ.

ಪ್ರಮಾಣ ಮಾಡುವ ಆಚರಣೆಗಳು ಆಯಾಯ ಮಾತಿನ ಸಮುದಾಯದ ಸಾಮಾಜಿಕ, ಸಾಂಸ್ಕೃತಿಕ ಜೀವನದಲ್ಲಿ ಪ್ರಮುಖವೆನಿಸಿದ ವ್ಯಕ್ತಿಗಳನ್ನು, ವಸ್ತುಗಳನ್ನು ಪ್ರಾಣಿಗಳನ್ನು, ದೇವರು ಹಾಗೂ ಅಗೋಚರ ಶಕ್ತಿಗಳನ್ನು ಪ್ರಮುಖವಾಗಿ ಒಳಗೊಂಡಿರುತ್ತವೆ. ಕನ್ನಡ ಮಾತಿನ ಸಮುದಾಯದಲ್ಲಿ ಈ ಕೆಳಕಂಡ ಆಚರಣೆಗಳು ಕಂಡುಬರುತ್ತವೆ.

ಆರೋಪಿಗಳು ಪ್ರಮಾಣವನ್ನು ಮಾಡುವಾಗ ವಿವಿಧ ಬಗೆಯ ಕ್ರಿಯೆಗಳಲ್ಲಿ ತೊಡಗುತ್ತಾರೆ. ತಮ್ಮ ಮಕ್ಕಳ ತಲೆಯ ಮೇಲೆ ಕೈಯಿಡುತ್ತಾರೆ. ತಮಗೆ ಬಹಳ ಪ್ರೀತಿಪಾತ್ರರಾದ, ಗೌರವಾನ್ವಿತರಾದ, ತಮ್ಮ ಜೀವನದ ಕಷ್ಟ-ಸುಖಗಳಿಗೆ ಬೇಕಾದವರಾದ ಬಂಧು-ಬಾಂಧವರ ಅಥವಾ ಮಿತ್ರರ ಕೈಗಳನ್ನು ಹಿಡಿದುಕೊಳ್ಳುತ್ತಾರೆ. ನಿರಂತರ ಸಂಬಂಧ ಮತ್ತು ಋಣದ ಸಂಕೇತವಾದ ಉಪ್ಪನ್ನು ಕೈಯಲ್ಲಿ ಹಿಡಿದುಕೊಂಡು ಅಥವಾ ಉಪ್ಪಿನ ಗುಡ್ಡೆಯ ಮೇಲೆ ನಿಂತು ಪ್ರಮಾಣ ಮಾಡುತ್ತಾರೆ. ಬಹುತೇಕ ಸಂದರ್ಭಗಳಲ್ಲಿ ಹಾಲನ್ನು, ಭೂಮಿಯನ್ನು, ಒಂದು ಹಿಡಿ ಮಣ್ಣನ್ನು, ನೀರನ್ನು, ಪುಸ್ತಕವನ್ನು, ಹುತ್ತವನ್ನು, ತಮ್ಮ ಕಣ್ಣುಗಳನ್ನು, ದನದ ತಲೆ ಅಥವಾ ಬಾಲವನ್ನು, ದೇವರ ಪಟ ಅಥವಾ ವಿಗ್ರಹಗಳನ್ನು, ದೇಗುಲದ ಹೊಸ್ತಿಲನ್ನು, ಅರಳಿ ಮರ ಅಥವಾ ತೆಂಗಿನ ಮರದ ಬುಡವನ್ನು ತಮ್ಮೆರಡು ಕೈಗಳಿಂದ ಮುಟ್ಟಿ ಪ್ರಮಾಣ ಮಾಡುತ್ತಾರೆ. ದೇವರಿಗೆ ಮಂಗಳಾರತಿ ಮಾಡಿದ ತಟ್ಟೆಯಲ್ಲಿ ಉರಿಯುತ್ತಿರುವ ಅಥವಾ ನೆಲದ ಮೇಲೆ ಹಚ್ಚಿಟ್ಟಿರುವ ಕರ್ಪೂರದ ಜ್ಯೋತಿಯ ಮೇಲೆ ಹಾಗೂ ಬೆಳಗುತ್ತಿರುವ ದೀಪದ ಕುಡಿಯ ಮೇಲೆ ತಮ್ಮೆರಡು ಹಸ್ತಗಳನ್ನಿಟ್ಟು ಪ್ರಮಾಣ ಮಾಡುತ್ತಾರೆ. ಅಡಕೆಯಿಂದ ಕೂಡಿರುವ ವೀಳ್ಯದ ಎಲೆಗಳನ್ನು ಕೈಯಲ್ಲಿ ತೆಗೆದುಕೊಂಡು, ಅವನ್ನು ತಮ್ಮ ಕಣ್ಣುಗಳಿಗೆ ಒತ್ತಿಕೊಳ್ಳುತ್ತಾರೆ. ಹೆಂಗಸರು ತಮ್ಮ ಕೊರಳಲ್ಲಿರುವ ತಾಳಿಯನ್ನು ಮುಟ್ಟಿ ಪ್ರಮಾಣ ಮಾಡುತ್ತಾರೆ.

ಪ್ರಪಂಚದ ಎಲ್ಲಾ ಜನಾಂಗಗಳಲ್ಲೂ ಚಿತ್ರವಿಚಿತ್ರವಾದ ಪ್ರಮಾಣ ಮಾಡುವ ಆಚರಣೆಯ ನಾನಾ ವಿಧಾನಗಳಿರುವುದು ವಿಸ್ಮಯಕಾರಿಯಾಗಿದೆ.

ಆಣೆ ಮತ್ತು ಪ್ರಮಾಣಗಳ ಸಾಮಾಜಿಕ ನಿಯೋಗಗಳು / ಕಾರ್ಯಗಳು

ಸಾಮಾಜಿಕ ವ್ಯವಹಾರದ ನಾನಾ ಬಗೆಯ ಮಾತಿನ ಸಂದರ್ಭಗಳಲ್ಲಿ ಜನರು ಬಳಸುತ್ತಿರುವ ಆಣೆ-ಪ್ರಮಾಣಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಮೇಲು ನೋಟಕ್ಕೆ ಅವು ಆರೋಪ ನಿರಾಕರಣೆಯ ಸಾಧನಗಳಂತೆ ಕಂಡುಬಂದರೂ ಅವುಗಳ ಬಳಕೆಯ ಹಿನ್ನೆಲೆಯಲ್ಲಿ ಬಹು ಬಗೆಯ ಉದ್ದೇಶಗಳು ಅಡಕಗೊಂಡಿರುವುದನ್ನು ನಾವು ಗ್ರಹಿಸಬಹುದು. ಸಾಮಾಜಿಕ ರಂಗದ ಮೂರು ಮುಖ್ಯ ನೆಲೆಗಳಾದ ಕೌಟುಂಬಿಕ ನೆಲೆ, ದುಡಿಮೆಯ ನೆಲೆ ಮತ್ತು ಸಾರ್ವಜನಿಕ ನೆಲೆಗಳಲ್ಲಿ ಬಳಕೆಯಾಗುತ್ತಿರುವ ಆಣೆ-ಪ್ರಮಾಣಗಳನ್ನು ವಿಶ್ಲೇಷಣೆ ಮಾಡಿದಾಗ, ಈ ಕೆಳಕಂಡ ಸಾಮಾಜಿಕ ನಿಯೋಗಗಳು ಪ್ರಮುಖವಾಗಿ ಕಂಡುಬರುತ್ತವೆ.

1) ಯಾವುದೇ ವ್ಯಕ್ತಿ, ತಾನು ಯಾವುದೇ ಬಗೆಯ ತಪ್ಪು, ಕಳ್ಳತನ ಅಥವಾ ವಂಚನೆಯನ್ನು ಮಾಡದಿದ್ದರೂ ತನ್ನ ಮೇಲೆ ಬಂದಿರುವ ಆರೋಪವನ್ನು ನಿರಾಕರಿಸಿ, ತನ್ನ ಪ್ರಾಮಾಣಿಕ ವ್ಯಕ್ತಿತ್ವವನ್ನು ಸಾಬೀತುಪಡಿಸುವುದು ಹಾಗೂ ತನ್ನ ನಡೆನುಡಿಗಳ ಬಗೆಗೆ ತತ್ಕಾಲದಲ್ಲಿ ಇತರರ ಮನದಲ್ಲಿ ಮೂಡಿರುವ ಕೆಟ್ಟ ಅಭಿಪ್ರಾಯಗಳನ್ನು ಹೋಗಲಾಡಿಸುವುದು. ಇದು ವ್ಯಕ್ತಿಯ ವ್ಯಕ್ತಿತ್ವ ಗಳಿಕೆಯ ವಾಸ್ತವತೆಗೆ ಅಗತ್ಯವಾಗುತ್ತದೆ.

2) ಯಾವುದೇ ವ್ಯಕ್ತಿ, ತನ್ನಿಂದಾಗಿರುವ ತಪ್ಪು, ತಾನು ಮಾಡಿರುವ ಕಳ್ಳತನ, ವಂಚನೆಯನ್ನು ಮುಚ್ಚಿಟ್ಟುಕೊಂಡು, ತನ್ನ ಮೇಲೆ ಬಂದಿರುವ ಆರೋಪವನ್ನು ಸಂಪೂರ್ಣವಾಗಿ ನಿರಾಕರಿಸುವುದು ಹಾಗೂ ಇತರರ ಮುಂದೆ ತಾನು ಪ್ರಾಮಾಣಿಕ ವ್ಯಕ್ತಿಯೆಂದು ತೋರಿಸಿಕೊಳ್ಳಲು ಪ್ರಯತ್ನಿಸುವುದು.

3) ಯಾವುದೇ ರೀತಿಯ ಸಾಮಾಜಿಕ ಸನ್ನಿವೇಶಗಳಲ್ಲಿ ವ್ಯಕ್ತಿಗಳಿಂದಾಗುವ ತಪ್ಪು, ಅಪರಾಧ ಅಥವಾ ವಂಚನೆಯನ್ನು ಸ್ಪಷ್ಟವಾದ ಸಾಕ್ಷ್ಯ ಹಾಗೂ ಆಧಾರಗಳಿಂದ ರುಜುವಾತುಪಡಿಸಲು ಸಾಧ್ಯವಾಗದಿದ್ದಾಗ, ಸಂಶಯಾಸ್ಪದ ವ್ಯಕ್ತಿಗಳನ್ನು ಆಣೆ-ಪ್ರಮಾಣಗಳ ಪರೀಕ್ಷೆಗೆ ಗುರಿಪಡಿಸಿ, ಅವರ ಮನದಲ್ಲಿ ಭೀತಿಭಾವ, ಪಾಪಪ್ರಜ್ಞೆ ಮತ್ತು ಮುಂದೆ ಉಂಟಾಗಬಹುದಾದ ತೀವ್ರ ಹಾನಿಯ

ಆತಂಕ ಹುಟ್ಟಿಸಿ, ನಿಜವಾದ ಅಪರಾಧಿಯು ಯಾರೆಂಬುದನ್ನು ಕಂಡುಹಿಡಿಯಲು ಪ್ರಯತ್ನಿಸುವುದು. ಇದಕ್ಕೆ ಎಂಥವರಾದರೂ ಭಯಭೀತಿಗೆ ಒಳಗಾಗುತ್ತಾರೆ.

4) ಯಾವುದೇ ವ್ಯಕ್ತಿ, ತಾನು ಮಾಡಲಿರುವ ಕಾರ್ಯದ ಬಗ್ಗೆ ಇತರರಿಗೆ ಭರವಸೆಯನ್ನು ನೀಡುವುದು. ಅಂತೆಯೇ ಕೆಲವು ಸನ್ನಿವೇಶಗಳಲ್ಲಿ ಹಲವು ಬಗೆಯ ಕಾರ್ಯಗಳನ್ನು ತಾನು ಇನ್ನು ಮುಂದೆ ಮಾಡುವುದಿಲ್ಲವೆಂದು ದೃಢವಾದ ನಿರ್ಧಾರವನ್ನು ಕೈಗೊಳ್ಳುವುದು. ಇದು ಆತ್ಮಶುದ್ಧಿಗೆ ಸಹಕಾರಿಯಾಗುತ್ತದೆ.

ಉದಾಹರಣೆ : ಪ್ರಸಂಗ – 2

ಸ್ಥಳ : ಮನೆ ಕಾಲ : ರಾತ್ರಿ 8 ಗಂಟೆ

ಭಾಗಿಗಳು :

1) ವಿಧವೆ ವಯಸ್ಸು 30
2) ವಿಧವೆಯ ತಾಯಿ ವಯಸ್ಸು 55
3) ವಿಧವೆಯ ಅಣ್ಣ ವಯಸ್ಸು 35
4) ಅಣ್ಣನ ಹೆಂಡತಿ ವಯಸ್ಸು 28

ಘಟನೆಯ ಹಿನ್ನಲೆ : ಮದುವೆಯಾದ ಕೆಲವು ವರ್ಷಗಳಲ್ಲೇ ಗಂಡನ ಆಕಸ್ಮಿಕ ಮರಣದಿಂದ ನೊಂದು ಮತ್ತು ಅತ್ತೆಯ ಮನೆಯ ಕಿರುಕುಳವನ್ನು ಸಹಿಸಲಾರದೆ ತನ್ನ ಚಿಕ್ಕ ಮಗುವಿನೊಡನೆ ತೌರುಮನೆಯಲ್ಲಿ ನೆಲೆಸಿದ್ದ ವಿಧವೆಯು ಅತ್ತಿಗೆಯ ಆಕ್ರೋಶಕ್ಕೆ ಗುರಿಯಾಗಿದ್ದಳು. ಮನೆಯಲ್ಲಾಗುತ್ತಿದ್ದ ಎಲ್ಲಾ ಬಗೆಯ ಕಷ್ಟನಷ್ಟಗಳಿಗೂ ಈಕೆಯನ್ನೇ ಗುರಿಮಾಡಿ ಅತ್ತಿಗೆಯು ಯಾವಾಗಲೂ ನಿಂದಿಸುತ್ತಿದ್ದಳು. ಒಮ್ಮೆ ಅಣ್ಣನ ಹೆಂಡತಿಯ ಚಿನ್ನದ ಸರವೊಂದು ಕಾಣೆಯಾದಾಗ, ನಡೆದ ಮಾತಿನ ಘಟನೆ :

ಅಣ್ಣನ ಹೆಂಡತಿ : (ಜೋರಾಗಿ ಕಿರುಚುತ್ತಾ)

ಗಂಡನ್ನ ತಿನ್ಕೊಂಡು ಯಾವತ್ತು ನಮ್ಮ ಮನೆಗೆ ಬಂದಳೋ, ಅವತ್ತೆ ನಮಗೆ ಅಲ್ಲಿಲ್ಲದ ಗ್ರಾಚಾರ ವಕ್ರಿಸ್ಕೋತು! (ವಿಧವೆಯನ್ನು ಉದ್ದೇಶಿಸಿ) ಸಂಜೆ ಮೈ ತೊಳ್ಕೋವಾಗ ನೀರ್ ಮನೇಲಿ ಬಿಚ್ಚಿಟ್ಟಿದ್ದ ನನ್ನ ಚಿನ್ನದ ಸರ ಎತ್ಕೊಂಡಿದ್ದೀಯಲ್ಲ, ಒಳ್ಳೆ ಮಾತ್ನಲ್ಲಿ ಕೇಳ್ತಾ ಇದ್ದೀನಿ, ಕೊಟ್ಬಿಡು.

(ಅತ್ತಿಗೆಯ ಆರೋಪದ ಮಾತುಗಳನ್ನು ಕೇಳಿ ಕ್ಷಣಕಾಲ ವಿಧವೆಯು ದಿಗ್ಭ್ರಾಂತಳಾಗುತ್ತಾಳೆ. ತಾಯಿಯು ಮಗಳ ಕಡೆ ನೋಡುತ್ತಾ ಕಂಬನಿ ತುಂಬಿಕೊಳ್ಳುತ್ತಾಳೆ.)

ವಿಧವೆ : (ತನ್ನ ಬಳಿ ನಿಂತಿದ್ದ ಮಗುವನ್ನು ಮುಂದಕ್ಕೆ ಎಳೆದುಕೊಂಡು, ಅದರ ತಲೆಯ ಮೇಲೆ ತನ್ನ ಕೈಗಳನ್ನಿಟ್ಟು) ಈ ನನ್ನ ಮಗೀನಾಣೆಗೂ ನಿನ್ನ ಚಿನ್ನದ ಸರ ನಾ ಕಾಣೆ. ಹಂಗೇನಾದ್ರೂ ನಾನು ಎತ್ಕೊಂಡಿದ್ರೆ ಇರೋದೊಂದು ಈ ಮಗೀನ ಆ ದೇವರು ಕಿತ್ಕೊಳ್ಳಿ.

ಅಣ್ಣನ ಹೆಂಡತಿ : ನಿನ್ನಂಥವಳಿಗೆ ಆಣೆ-ಪ್ರಮಾಣ ಬ್ಯಾರೆ ಕೇಡು. ಮರ್ಯಾದೆಯಾಗಿ ನನ್ನ ಸರ ಕೊಟ್ಬುಡು. ಇಲ್ದೇ ಇದ್ರೆ ನಿಮ್ಮ ಅಣ್ಣ ಬಂದ್ಮೇಲೆ, ಸರಿಯಾದ ಮೋಕ್ಷ ಮಾಡಿಸ್ತೀನಿ. ಆಮೇಲೆ ತಿನ್ನೋ ಅನ್ನಕ್ಕೂ ಗತಿಯಿಲ್ದಂಗಾಯ್ತದೆ.

ವಿಧವೆ : ತಿನ್ನೋ ಅನ್ನದಾಣೆಗೂ ನಾ ಎತ್ಕೊಂಡಿಲ್ಲ. ಯಾಕಿಂಥ ಅನ್ಯಾಯ ಆಡೀಯೆ ನನ್ಮೇಲೆ ? ನಿಂಗೆ ಅಷ್ಟು ಅನುಮಾನ ನನ್ಮೇಲಿದ್ದರೆ ಈಗ್ಲೆ ನಡಿ ಚೌಡಮ್ಮನ ಗುಡಿ ತಕೆ, ಗುಡಿ ಹೊಸಲಲ್ಲಿ ನನ್ ಮಗೀನ ಮಲಗಿಸ್ಬುಟ್ಟು ಪ್ರಮಾಣ ಮಾಡ್ತೀನಿ.

ಅಣ್ಣನ ಹೆಂಡತಿ : ಎಲ್ಲಾ ಕಿತ್ ನಿಂತಿರೂ ಮುಂಡೆ ನೀನು ! ಏನು ಮಾಡೂಕೆ ತಾನೆ ಹೇಸಿಯೇ! ನಿನ್ನ ಆಣೆ ಪ್ರಮಾಣ ಕಟ್ಕೊಂಡು ನಂಗೇನಾಗ್ಬೇಕು? ಮೊದಲು ನನ್ ಸರ ಕೊಟ್ಬುಟ್ಟು ಮಾತಾಡು.

ತಾಯಿ : ಮನೇಗೆ ಅವನು ಬಂದ್ಮೇಲೆ ಏನಾರ ಮಾಡೂರಿ. ಈಗ ಇಬ್ಬರು ಸುಮ್ನಿರಿ.

(ಸೊಸೆಯನ್ನು ಕುರಿತು)

ನೀರ್ ಮನೇಲಿ ಬಿಚ್ಚಿಟ್ಟಿದ್ದ ಸರ ಎಲ್ಲೋದದು ? ಸರಿಯಾಗಿ ಹುಡುಕಿ ನೋಡವ್ವ. ನೀನೇ ಮರೆತುಬುಟ್ಟು ಇನ್ನೆಲ್ಲಾದ್ರೂ ಇಟ್ಟಿದ್ದೀಯ ಅಂತ ನೆಪ್ಪುಮಾಡ್ಕೊ.

(ಅತ್ತೆಯ ಮಾತುಗಳಿಂದ ಕೆರಳಿದ ಸೊಸೆಯು ಮತ್ತಷ್ಟು ಕಿರಿಚಾಡುತ್ತ, ಮನೆಯಲ್ಲೆಲ್ಲಾ ಹುಡುಕತೊಡಗುತ್ತಾಳೆ. ವಿಧವೆಯು ತನ್ನ ಮಗುವನ್ನು ತಬ್ಬಿಕೊಂಡು ಅಳತೊಡಗುತ್ತಾಳೆ. ಇದಾದ ಸ್ವಲ್ಪ ಹೊತ್ತಿನಲ್ಲಿ ಮನೆಗೆ ಅಣ್ಣನು ಬಂದಾಗ, ಸರ ಕಾಣೆಯಾಗಿರುವ ಸುದ್ದಿಯನ್ನು ತಾಯಿಯು ಅವನಿಗೆ ತಿಳಿಸುತ್ತಾಳೆ. ನೀರಿನ ಮನೆಯ ಕಿಟಕಿಯಲ್ಲಿ ತನ್ನ ಹೆಂಡತಿಯು ಬಿಚ್ಚಿಟ್ಟಿದ್ದ ಚಿನ್ನದ ಸರವನ್ನು ತಾನು ಜೋಪಾನವಾಗಿ ಎತ್ತಿಟ್ಟಿರುವುದಾಗಿ ಹೇಳಿ, ಹೆಂಡತಿಯ ಬೇಜವಾಬ್ದಾರಿತನಕ್ಕೆ ಬುದ್ಧಿ ಕಲಿಸಬೇಕೆಂಬ ಉದ್ದೇಶದಿಂದ ಹಾಗೆ ಮಾಡಿದ್ದಾಗಿ ತಿಳಿಸುತ್ತಾನೆ.)

ಪ್ರಸಂಗ - 3

ಸ್ಥಳ : ಹಳ್ಳಿಯೊಂದರ ಅಂಗಡಿ ವೇಳೆ : ಸಂಜೆ ಐದು ಘಂಟೆ

ಭಾಗಿಗಳು : 1) ಅಂಗಡಿಯ ಮಾಲೀಕ - ವಯಸ್ಸು 30

2) ಹೆಂಗಸು - ವಯಸ್ಸು 55

3) ಇಬ್ಬರು ಗಿರಾಕಿಗಳು - ಒಬ್ಬನ ವಯಸ್ಸು 18, ಮತ್ತೊಬ್ಬನದು 20.

ಘಟನೆಯ ಹಿನ್ನೆಲೆ : ವ್ಯಾಪಾರದ ಸಂದರ್ಭದಲ್ಲಿ ಅಂಗಡಿಯವನ ಕಣ್ಣು ತಪ್ಪಿಸಿ, ವಸ್ತುವೊಂದನ್ನು ಆ ಹೆಂಗಸು ಅಂಗಡಿಯಿಂದ ಕದ್ದು, ತನ್ನ ಮಡಿಲಿನಲ್ಲಿ ಬಚ್ಚಿಟ್ಟುಕೊಂಡಳು. ಇದನ್ನು ಅಂಗಡಿಯವನು ಅಸ್ಪಷ್ಟವಾಗಿ ಗಮನಿಸಿದಾಗ ನಡೆದ ಮಾತಿನ ಘಟನೆ.

ಅಂಗಡಿಯವನು : ಅದೇನಮ್ಮ ಎತ್ಕಂಡಿದ್ದು ನೀನು ?

ಹೆಂಗಸು : ನಾನೇನ್ ಎತ್ಕೊಂಡೆ ? ನೋಡಿಲ್ಲಿ....

(ತನ್ನ ಬರಿಗೈಗಳನ್ನು ತೋರಿಸುತ್ತಾಳೆ. ಅಲ್ಲೇ ನಿಂತಿದ್ದ ಇನ್ನಿಬ್ಬರು ಇವರ ಮಾತುಗಳನ್ನು ಸುಮ್ಮನೆ ಕೇಳಿಸಿಕೊಳ್ಳುತ್ತಿದ್ದಾರೆ.)

ಅಂಗಡಿಯವನು : ನಿಜ ಹೇಳು. ಇದು ಲಕ್ಷ್ಮೀ ಇರೂ ಜಾಗ. ಇಲ್ಲೇನಾದ್ರೂ ಸುಳ್ಳು ಹೇಳುದ್ರೆ, ನಿನ್ನನೆ ಎಕ್ಕುಟ್ಟೋಯ್ತದೆ!

ಹೆಂಗಸು : ಯಾಕಯ್ಯಾ ನನ್ನನೆ ಎಕ್ಕುಟ್ಟೋದದು ? ಏನು ಹಿಂಗೆ ತೂರ್ಸಿ ಮಾತಾಡ್ತಿಯಲ್ಲ?

ಅಂಗಡಿಯವನು : (ಇನ್ನುಳಿದ ಇಬ್ಬರು ಗಿರಾಕಿಗಳತ್ತ ತಿರುಗಿ)

ನಾನು ಸಾಮಾನು ತೆಗೆಯೋಕೆ ಅತ್ತಗೆ ತಿರುಗಿದ್ದಾಗ, ಈವ್ರೊಮ್ಮ ಅಂಗಡಿಯಿಂದ ಏನನ್ನೂ ಎತ್ಕೊಂಡಳಲ್ಲವೇ ?

(ಅವರಿಬ್ಬರೂ ನಾವೇನನ್ನೂ ಕಾಣೆವು ಎಂಬಂತೆ ತಲೆಯಲ್ಲಾಡಿಸುತ್ತಾರೆ.)

ಹೆಂಗಸು : ನೋಡ್ದೇನಯ್ಯ, ಹಂಗೇನಾದ್ರು ನಾನು ಎತ್ಕೊಂಡಿದ್ರೆ ಅವರು ಹೇಳ್ತಿರಲಿಲ್ಲವೇ? ನನ್ನಾಣೆಗೂ.... ನನ್ ಮಕ್ಕಳಾಣೆಗೂ ನಾನು ಏನು ಎತ್ಕೊಂಡಿಲ್ಲ, ಅಂತದೇನು ನಂಗೆ ಬಂದಿರೂದು ?

ಅಂಗಡಿಯವನು : ಹಂಗಾದ್ರೆ ಕರ್ಪೂರ ಹತ್ತೀಸ್ತೀನಿ. ಅದರ ಮೇಲೆ ಕೈಯಿಟ್ಟು ಅಂಗಡೀಲಿ ಏನನ್ನೂ ಎತ್ಕೊಂಡಿಲ್ಲ ಅಂತ ಪ್ರಮಾಣ ಮಾಡ್ತೀಯ?

ಹೆಂಗಸು : ನಾನ್ಯಾಕಯ್ಯ ಮಾಡನೇ ? ನಾನು ತಕ್ಕೊಂಡಿದ್ರೆ ನನ್ ಮನೆ ಹಾಳಾಗೋಯ್ತದೆ ಕಣ ಹೋಗು. ನೋಡ್ದ ನಿನ್ನ ಅಂಗಡಿಗೆ ಬಂದಿದ್ದಕ್ಕೆ ಎಂಥಾ ಮಾತು ಕೇಳ್ಬೇಕಾಗಿ ಬಂತು. ಇನ್ನೊಂದು ದಪ ಇತ್ತಗೆ ಮೊಕಹಾಕೊಂಡು ಬಂದ್ರೆ ಕೇಳು.

(ಎನ್ನುತ್ತಾ ಅಲ್ಲಿಂದ ತರಾತುರಿಯಾಗಿ ಹೊರಡುತ್ತಾಳೆ. ಅವಳ ವರ್ತನೆಯಿಂದ ಅಂಗಡಿಯವನಿಗೆ ಆಕೆ ಏನನ್ನೋ ಕದ್ದಿರುವುದು ದಿಟವೆಂದು ಗೊತ್ತಾದರೂ ಹೆಚ್ಚು ರಾದ್ಧಾಂತ ಮಾಡಿದರೆ, ವ್ಯಾಪಾರಕ್ಕೆ ತೊಂದರೆಯಾಗಬಹುದೆಂಬ ದೂರದೃಷ್ಟಿಯಿಂದ ಅದನ್ನು ಅಲ್ಲಿಗೆ ಕೈಬಿಡುತ್ತಾನೆ.)

ಅಂಗಡಿಯವನು : ಏನೋ ವಯಸ್ಸಾದೋಳು ಅಂತ ಸುಮ್ಮನಾಗಿವ್ನಿ. ಇಲ್ದೇ ಇದ್ರೆ ಅವಳ ಮಡಲ ಒದರಿಸಿ ಕಳಿಸ್ತಾಯಿದ್ದೆ.
(ಎಂದು ತನ್ನಲ್ಲಿಯೇ ಗೊಣಗಿಕೊಳ್ಳುತ್ತಾ, ಇನ್ನುಳಿದ ಗಿರಾಕಿಗಳತ್ತ ಗಮನ ಹರಿಸುತ್ತಾನೆ.)

ಪ್ರಸಂಗ - 4

ಸ್ಥಳ : ಮನೆ ಕಾಲ : ಬೆಳಿಗ್ಗೆ 8 ಘಂಟೆ

ಭಾಗಿಗಳು : 1) ಗಂಡ ವಯಸ್ಸು 30
2) ಹೆಂಡತಿ ವಯಸ್ಸು 22
3) ತಾಯಿ ವಯಸ್ಸು 50

ಘಟನೆಯ ಹಿನ್ನೆಲೆ : ಊರಿನಲ್ಲಿ ನಡೆದ ಹಬ್ಬದ ಪ್ರಯುಕ್ತ ದೇವಸ್ಥಾನದಲ್ಲಿ ನೆನ್ನೆ ದೊಡ್ಡ ಉತ್ಸವ ನಡೆದಿತ್ತು. ಆ ಉತ್ಸವಕ್ಕೆ ಹೋಗಿದ್ದ ಹೆಂಡತಿಯು ದೇವಸ್ಥಾನದ ಮುಂದೆ ನಡೆಯುತ್ತಿದ್ದ ರಂಗದ ಕುಣಿತವನ್ನು ನೋಡಿ ಆನಂದಿಸುತ್ತಿದ್ದಾಗ, ಅವಳ ಪಕ್ಕದಲ್ಲಿ ಒಂದಿಬ್ಬರು ಯುವಕರು ನಿಂತಿದ್ದುದನ್ನು ದೂರದಿಂದ ಗಮನಿಸಿದ್ದ ಅವಳ ಗಂಡನು ಮಾರನೆಯ ದಿನ ಬೆಳಿಗ್ಗೆ ಅವಳ ಶೀಲದ ಬಗ್ಗೆ ಅನುಮಾನ ವ್ಯಕ್ತಪಡಿಸಿದಾಗ ನಡೆದ ಮಾತಿನ ಘಟನೆ :

ಗಂಡ : ನೆನ್ನೆ ಗುಡಿತಕೆ ಹೋಗಿದ್ದಲ್ಲ ? ದೇವರು ಮಾಡೋದು ಬುಟ್ಟುಟ್ಟು ಯಾರ ಜೊತೇಲಿ ಚಕ್ಕಂದ ಆಡ್ಕೊಂಡು ನಿಂತಿದ್ದೆ ?

ಹೆಂಡತಿ : (ತುಂಬಾ ಅಚ್ಚರಿ ಮತ್ತು ಸಂಕಟದಿಂದ ತಬ್ಬಿಬ್ಬಾಗಿ) ಇದೇನು ಇಂಥ ಮಾತಾಡ್ತಾ ಇದ್ದೀರಲ್ಲ? ನಿಮ್ಗೇನ್ ಬಂದೀರೂದು! ನಾನು ಅಂಥವ್ಳೆ?

ಗಂಡ : ಅಂಥವಳು ಅಲ್ದೇದ್ರೆ, ಅಲ್ಲಿ ಹಲ್ಲು ಬುಟ್ಕೊಂಡು ಕಿಸೀತಾ ನಿಂತಿದ್ದಲ್ಲ ಯಾಕೆ ? ನಾನೇ ಕಣ್ಣಾರೆ ಕಂಡೆ.

ಹೆಂಡತಿ : ದೇವರ ಆಪಾಟಿ ಚೆಂದಾಗಿ ಮೆರಿಸ್ತಾ ಇರೂದ ಕಣ್ತುಂಬ ಕಂಡು ಆಗ ನಾನು ನಗನಗ್ತಾ ಇದ್ರೆ, ನೀವ್ಯಾಕೆ ಹಿಂಗೆಲ್ಲ ಕೆಟ್ಟ ಮಾತ

ಆಡ್ತಾಯಿದ್ದೀರಿ ? (ಅಪಮಾನದ ನೋವಿನಿಂದ ಉಕ್ಕಿ ಬಂದ ಕಂಬನಿಯನ್ನು ಸೆರಗಿನಿಂದ ಒರೆಸಿಕೊಳುತ್ತ, ಆಕ್ರೋಶದ ಧ್ವನಿಯಲ್ಲಿ) ಆ ಮದ್ದೂರಮ್ಮನಾಣೆಗೂ ಅಲ್ಲಿ ಯಾರನ್ನು ನಾನು ಕಣ್ಣೆತ್ತಿ ನೋಡಲಿಲ್ಲ. ಹಂಗೇನಾದ್ರು ನೋಡಿದ್ರೆ, ನನ್ ಕಣ್ ಹಿಂಗೋಗ್ಲಿ. ನಿಮಗೆ ಅಷ್ಟೊಂದು ಅನುಮಾನ ಇದ್ರೆ ಈಗ್ಲೇ ನಡೀರಿ, ಅದೇ ಗುಡಿ ಮುಂದೆ ಪ್ರಮಾಣ ಮಾಡ್ತೀನಿ.

ತಾಯಿ : (ತನ್ನ ಮಗನು ಆಡಿದ ಮಾತುಗಳನ್ನು ಕೇಳಿ, ಅವನ ಬಗ್ಗೆ ಅಸಹ್ಯಪಡುತ್ತ) ಯಾಕ್ಲ ಹಿಂಗಾಡಿಯೇ? ನಿಂಗೇನ್ ಬಂದಿರೂದು ಮೊಲ್ಲಾಗ್ರು! ಅವಳ ಮ್ಯಾಲೆ ವರ್ಷಕ್ಕೊಂದು ಹಬ್ಬದಲ್ಲಿ ಯಾಕೆ ಹಿಂಗೆ ಗೂಬೆ ಕುಂಡಿಸ್ತಾ ಇದ್ದೀಯೆ? ಆಚೆಗೆ ಹೋಗಿ ಏನಾದ್ರೂ ಗೇಮೇ ನೋಡು ನಡಿ. ಯಾರಾದ್ರು ಅಪ್ಪಂತವರು ನಿನ್ನ ಮಾತ ಕೇಳಿಸ್ಕೊಂಡ್ರೆ ಏನಂದರು ಅನ್ನು ಗ್ಯಾನ ಇದ್ದದೆ ನಿಂಗೆ ?

(ಹೆಂಡತಿಯು ಹಾಕಿದ ಪ್ರಮಾಣದ ಸವಾಲು ಮತ್ತು ತಾಯಿ ಅಬ್ಬರದ ಮುಂದೆ ತಣ್ಣಗಾದ ಆತ ಮನೆಯಿಂದ ಹೊರ ನಡೆಯುತ್ತಾನೆ.)

ಪ್ರಸಂಗ - 5

ಸ್ಥಳ : ಬಡವರ ಗುಡಿಸಲುಗಳಿರುವ ವಾಸ ಸ್ಥಳ. ಕಾಲ : ರಾತ್ರಿ ಹತ್ತು ಘಂಟೆ.

ಭಾಗಿಗಳು :
1) ವಿವಿಧ ವಯೋಮಾನದ ಇಪ್ಪತ್ತು ಮಂದಿ ಗಂಡಸರು ಮತ್ತು ಹತ್ತು ಮಂದಿ ಹೆಂಗಸರು.
2) ಚುನಾವಣಾ ಅಭ್ಯರ್ಥಿ - ವಯಸ್ಸು 45 ವರ್ಷದ ಗಂಡಸು.
3) ಅಭ್ಯರ್ಥಿಯ ಸಂಗಡಿಗ - ವಯಸ್ಸು 25
4) ನಿರೂಪಕ - ವಯಸ್ಸು 30.

ಘಟನೆಯ ಹಿನ್ನೆಲೆ : ಮಾರನೆಯ ದಿನ ಬೆಳಿಗ್ಗೆ ನಡೆಯಲಿರುವ ಪುರಸಭಾ ಸದಸ್ಯರ ಚುನಾವಣೆಯಲ್ಲಿ ತನಗೆ ಮತ ನೀಡಬೇಕೆಂದು ಯಾಚಿಸುವುದಕ್ಕಾಗಿ ಅಭ್ಯರ್ಥಿಯು ತನ್ನ ಸಂಗಡಿಗನೊಂದಿಗೆ ಬಂದಿದ್ದಾನೆ. ಮತ

ಯಾಚನೆಯ ನಂತರ, ಅವರೆಲ್ಲರನ್ನೂ ಒಂದೆಡೆ ಕುಳ್ಳಿರಿಸಿ, ಅವರಿಗೆ ಹಣವನ್ನು ಹಂಚಲೆಂದು ಸಿದ್ಧತೆ ಮಾಡಿಕೊಳ್ಳುತ್ತಾನೆ. ಅದೇ ಸಮಯಕ್ಕೆ ಸರಿಯಾಗಿ ಅಭ್ಯರ್ಥಿಯ ಸಂಗಡಿಗನು ಒಂದು ದೊಡ್ಡ ಗಾತ್ರದ ಕರ್ಪೂರದ ಗೆಡ್ಡೆಯನ್ನು ನೆಲದ ಮೇಲಿಟ್ಟು, ಹಚ್ಚುತ್ತಾನೆ.

ಸಂಗಡಿಗ : (ಮತದಾರರನ್ನು ಕುರಿತು) ಒಬ್ಬೊಬ್ಬರಾಗಿ ಮುಂದಕ್ಕೆ ಬಂದು ರಾಮಣ್ಣನವರ ಕೈಯಿಂದ ದುಡ್ಡು ಈಸ್ಕೊಳ್ಳಿ.

ಮತದಾರ 1 : (ಉರಿಯುತ್ತಿರುವ ಕರ್ಪೂರದ ಜ್ಯೋತಿಯ ಮೇಲೆ ತನ್ನ ಅಂಗೈಯನ್ನಿಟ್ಟು, ರಾಮಣ್ಣನವರನ್ನು ನೋಡುತ್ತಾ) ಇದರ ಸಾಕ್ಷಿಯಾಗಿ ನಾಳೆ ನಿಮಗೆ ಓಟುಹಾಕ್ತೀನಿ ಕಣ್ರಪ್ಪ.

ಸಂಗಡಿಗ : ಯಾವ ಹೆಸರಿಗೆ, ಯಾವ ಗುರುತಿಗೆ ಅಂತ ಬಾಯ್ಬುಟ್ಟು ಹೇಳು.

ಮತದಾರ 1 : ಇದೇನ್ರಪ್ಪ ಹಿಂಗೆ ಕೇಳ್ತೀರಿ ? ನಂಗೆ ಗೊತ್ತಿಲ್ವೆ. ನಮ್ಮ ರಾಮಣ್ಣೋರ ಕುದುರೆ ಗುರುತಿಗೆ ಓಟು ಹಾಕ್ತೀನಿ.

ಅಭ್ಯರ್ಥಿಹೂ ಹಂಗೆ ಹೇಳು. ತಕೊ ದುಡ್ಡ. (ಐವತ್ತು ರೂಪಾಯಿಗಳನ್ನು ಕೊಡುತ್ತಾನೆ.) ಬನ್ನಿ ಎಲ್ಲರೂ ಇವನಂಗೆ ಹೇಳಿ, ದುಡ್ಡು ತಕೊಳ್ಳಿ. (ಉಳಿದವರೆಲ್ಲರೂ ಇದೇ ರೀತಿ ಉರಿಯುತ್ತಿರುವ ಜ್ಯೋತಿಯ ಮೇಲೆ ಅಂಗೈಯಿಟ್ಟು ಪ್ರಮಾಣ ಮಾಡಿ ಹಣ ಪಡೆಯುತ್ತಾರೆ. ಅಭ್ಯರ್ಥಿ ಮತ್ತು ಅವನ ಸಂಗಡಿಗ ಅಲ್ಲಿಂದ ತೆರಳಿದ ನಂತರ, ಅಲ್ಲೇ ಇದ್ದ ನಿರೂಪಕನು ಮತದಾರರಲ್ಲಿ ಹಲವರ ಜೊತೆ ಮಾತನಾಡತೊಡಗುತ್ತಾನೆ.)

ನಿರೂಪಕ : ಹಿಂಗೆ ಎಲ್ಲಾ ಅವರತ್ರ ದುಡ್ಡನ್ನ ಈಸ್ಕೊಂಡ್ರಲ್ಲ, ನಾಳೆ ಎಲ್ಲರೂ ರಾಮಣ್ಣನವರಿಗೆ ಗ್ಯಾರಂಟಿಯಾಗಿ ಓಟು ಹಾಕ್ತರೊ ?

ಮತದಾರ 2 : ಹೂ ಹಾಕ್ತರೆ.

ಮತದಾರ 1 : ಎಲ್ಲರೂ ಹಾಕೇಹಾಕ್ತರೆ ಅಂತ ಹೇಳೂಕಾಗೂದಿಲ್ಲ, ಕೆಲವರು ಬ್ಯಾರೆಯವರ್ಗೂ ಹಾಕ್ತರೆ.

ನಿರೂಪಕ : ಮಂತೆ ಬೆಂಕಿ ಮೇಲೆ ಕೈಯಿಟ್ಟು ಪ್ರಮಾಣಮಾಡುದ್ರುಲ್ಲ! ಏನಾದ್ರೂ ಕೆಟ್ಟುದ್ದು ಆಯ್ತದೆ ಅನ್ನು ಭಯ ಇಲ್ವೇ ?

ಮತದಾರ 3 : ಭಯ ಯಾಕಪ್ಪ ? ಪ್ರಮಾಣ ಮಾಡ್ಬುಟ್ರೆ ಏನಾಗೋಯ್ತು ? ಏನು ಅವರ ಮನೆ ದುಡ್ಡು ತಂದ್ಕೊಟ್ಟಿದ್ದರ ? ಯಾರದೋ ತಲೆಹೊಡ್ದು ಸಂಪಾದನೆಮಾಡೀರು ದುಡ್ಡ ಹಿಂಗೆ ನಮ್ಮಂಥವರಿಗೆ ಕೊಡ್ತರೆ.

ಮತದಾರ 4 : ಇವರಂಗೆ ಇನ್ನೂ ಮೂರ್ನಾಕು ಜನ ಓಟಿಗೆ ನಿಂತಿರೂರು ದುಡ್ಡು, ಪಂಚೆ, ಸೀರೆ ಕೊಟ್ಟು ಹಿಂಗೆ ಪ್ರಮಾಣಮಾಡಿಸ್ಕೊಂಡು ಹೋಗವ್ರೆ.

ನಿರೂಪಕ : ಹಂಗಾದ್ರೆ ಯಾರ್ಗೆ ಹಾಕ್ತೀರಿ ಓಟನ್ನ ?

ಮತದಾರ 1 : ಪ್ರಮಾಣ ಮಾಡುವಾಗ ಬಾಯಲ್ಲಿ ನಾವೇನೆ ಅಂದರೂ, ಒಳಗಡೆ ಮನಸಲ್ಲಿ "ದೇವರೇ, ಇದೆಲ್ಲಾ ಸುಮ್‌ಸುಮ್ನೆ ಕಣಪ್ಪ" ಅಂತ ಹೇಳ್ಕೊಂಡಿರ್‍ತೀವಿ. ನಾಳಾಕೆ ಅಲ್ಲಿಗೆ ಹೋದಾಗ ಯಾರ್ಗೆ ಹಾಕ್ಬೇಕು ಅಂತ ಅನ್ನಿಸ್ತದೊ ಅವರಿಗೆ ಒತ್ತುಬುಟ್ಟು ಬತ್ತೀವಿ. (ಹೀಗೆ ಚುನಾವಣಾ ವಿಷಯ ಮಾತನಾಡುತ್ತಿದ್ದು ಕೆಲ ಸಮಯದ ನಂತರ ಎಲ್ಲರೂ ಅಲ್ಲಿಂದ ಚದುರುತ್ತಾರೆ.)

ಆಣೆ-ಪ್ರಮಾಣಗಳ ಬಳಕೆಯ ಸಂದರ್ಭಗಳಲ್ಲಿ ಕಂಡುಬರುವ ಸಾಮಾಜಿಕ ಸಂಗತಿಗಳು :

ಯಾವುದೇ ಬಗೆಯ ಮಾತಿನ ಘಟನೆಯಲ್ಲಿ ಭಾಗಿಗಳಾಗುವ ವ್ಯಕ್ತಿಗಳು ಆಡುವ ಮಾತುಗಳಿಗೆ ಬೆಲೆ ಬರಬೇಕಾದರೆ, ಭಾಗಿಗಳ ಸಾಮಾಜಿಕ ಅಂತಸ್ತು ಬಹು ಮುಖ್ಯವಾಗುತ್ತದೆ. ಜೈವಿಕ ಅಂಶಗಳಾದ ಲಿಂಗ, ವಯಸ್ಸು ಹಾಗೂ ದೈಹಿಕ ಶಕ್ತಿ; ಸಾಮಾಜಿಕ ಸಂಗತಿಗಳಾದ ಜಾತಿ, ಮತ, ವಿದ್ಯೆ, ಅಧಿಕಾರ, ಸಂಪತ್ತು, ಪ್ರಾಂತ್ಯ ಹಾಗೂ ಭಾಷೆಗಳಿಂದ ವ್ಯಕ್ತಿಗಳಿಗೆ ಸಾಮಾಜಿಕ ಅಂತಸ್ತು ಪ್ರಾಪ್ತವಾಗುತ್ತದೆ. ಈ ಹಿನ್ನೆಲೆಯಿಂದ ಆಣೆ-ಪ್ರಮಾಣಗಳ ಬಳಕೆಯ ಸಾಮಾಜಿಕ ಸಂದರ್ಭಗಳನ್ನು ಗಮನಿಸಿದಾಗ ಭಾಗಿಯಾದ ವ್ಯಕ್ತಿಗಳ ಪೈಕಿ, ಯಾರ ಸಾಮಾಜಿಕ ಅಂತಸ್ತು ಕಡಿಮೆಯಿರುತ್ತದೆಯೋ, ಅಂತಹ ವ್ಯಕ್ತಿಯು ತಾನು ಹೇಳುತ್ತಿರುವ ವಿಷಯವನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಆಣೆ-ಪ್ರಮಾಣಗಳನ್ನು ಬಳಸುತ್ತಾನೆ. ವ್ಯಕ್ತಿಯು ಸಾಮಾಜಿಕ ಅಂತಸ್ತಿನ ಸೂಚ್ಯಂಕ ಏರಿಕೆಯಾದಂತೆಲ್ಲಾ ಬಳಕೆಯ ಪ್ರಮಾಣ ಕಡಿಮೆಯಾಗುತ್ತದೆ; ಇಳಿಕೆಯಾದಂತೆಲ್ಲಾ ಹೆಚ್ಚಾಗುತ್ತದೆ. ಅತಿ ಹೆಚ್ಚಿನ ಸಂದರ್ಭಗಳಲ್ಲಿ ಆಣೆ-ಪ್ರಮಾಣಗಳು ಏಕಮುಖವಾಗಿ ಬಳಕೆಯಾಗುತ್ತವೆ.

ಅಂದರೆ ಮಾತಿನ ಸಂದರ್ಭದಲ್ಲಿ ಮೇಲಿನ ಸ್ಥಾನಮಾನದಲ್ಲಿರುವವರ ಮುಂದೆ ಕೆಳಹಂತದಲ್ಲಿರುವವರು ಮಾತ್ರ ಬಳಸುತ್ತಾರೆ. ಆಣೆ-ಪ್ರಮಾಣಗಳ ಬಳಕೆಗೆ ನಿರ್ದಿಷ್ಟವಾದ ವೇಳೆ ಎಂಬುದಿಲ್ಲ, ಇಬ್ಬರು ಅಥವಾ ಅನೇಕರ ನಡುವೆ ವ್ಯವಹಾರಗಳು ನಡೆಯುವ ಯಾವುದೇ ಮಾತಿನ ಸಂದರ್ಭಗಳಲ್ಲಾದರೂ ಇವು ಬಳಕೆಯಾಗಬಹುದು.

ಕೌಟುಂಬಿಕ ನೆಲೆ, ದುಡಿಮೆಯ ನೆಲೆ, ಸಾರ್ವಜನಿಕ ನೆಲೆಗಳಲ್ಲಿ ಬಳಕೆಯಾಗುತ್ತಿರುವ ಆಣೆ-ಪ್ರಮಾಣಗಳನ್ನು ನಾನಾಮುಖಗಳಿಂದ ಅವಲೋಕಿಸಿದಾಗ ಹಲವಾರು ಸಾಮಾಜಿಕ ಸಂಗತಿಗಳು ಎದ್ದು ಕಾಣುತ್ತವೆ.

ಕೌಟುಂಬಿಕ ನೆಲೆ :

ಕುಟುಂಬಗಳ ಸಾಮಾಜಿಕ ಅಂತಸ್ತಿಗೆ ಅನುಗುಣವಾಗಿ ವಿವಿಧ ಪ್ರಮಾಣದಲ್ಲಿ ಆಣೆ-ಪ್ರಮಾಣಗಳ ಬಳಕೆಯಾಗುತ್ತಿರುವುದು ಕಂಡುಬರುತ್ತದೆ. ಶ್ರೀಮಂತ ವರ್ಗ, ಮಧ್ಯಮ ಮೇಲು ವರ್ಗ, ಮಧ್ಯಮ ವರ್ಗದ ಕುಟುಂಬಗಳಲ್ಲಿ - ಅವು ಯಾವುದೇ ಜಾತಿಗೆ ಸೇರಿರಲಿ - ಬಳಕೆಯು ತುಂಬಾ ಕಡಿಮೆ ಪ್ರಮಾಣದಲ್ಲಿರುತ್ತದೆ. ಏಕೆಂದರೆ ''ಮನೆಯೊಳಗೆ ಎಂತಹ ಸಂದರ್ಭದಲ್ಲೂ ಯಾರೇ ಆಗಲಿ ಆಣೆ-ಪ್ರಮಾಣಗಳನ್ನು ಮಾಡಬಾರದು. ಅದರಿಂದ ಯಾರಿಗೂ ಒಳ್ಳೆಯದಾಗುವುದಿಲ್ಲ. ಆಣೆ ಭಾಷೆಯನ್ನು ಹೆಚ್ಚಾಗಿ ಆಡುವವರ ಮನೆಯು ಬೇಗ ಹಾಳಾಗುತ್ತದೆ'' ಎಂಬ ಭೀತಿ ಭಾವ ಜನಮನದಲ್ಲಿ ನೆಲೆಯೂರಿದೆ. ಇದೇ ಬಗೆಯ ಭೀತಿಯನ್ನು ಮಧ್ಯಮ ಕೆಳವರ್ಗ ಮತ್ತು ಬಡವರ್ಗಕ್ಕೆ ಸೇರಿದ ಕುಟುಂಬದ ಸದಸ್ಯರು ಹೊಂದಿದ್ದರೂ, ಅವರಲ್ಲಿ ಆಣೆ-ಪ್ರಮಾಣಗಳ ಬಳಕೆಯು ಹೆಚ್ಚಾಗಿರುತ್ತದೆ. ಏಕೆಂದರೆ ಬಹುಬಗೆಯ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳಿಗೆ ಪದೇ ಪದೇ ಗುರಿಯಾಗುವ ಈ ವರ್ಗಗಳ ಜನರಲ್ಲಿ ಕೌಟುಂಬಿಕ ಪರಿಸ್ಥಿತಿಯನ್ನು ಎದುರಿಸಲು ಅಥವಾ ನಿಭಾಯಿಸಲು ಕೆಲವು ಸಂದರ್ಭಗಳಲ್ಲಿ ಆಣೆ-ಪ್ರಮಾಣಗಳ ಬಳಕೆ ಅನಿವಾರ್ಯವಾಗುತ್ತದೆ.

ಕುಟುಂಬದ ಸದಸ್ಯರ ನಡುವೆ ಆಣೆ-ಪ್ರಮಾಣಗಳು ಬಳಕೆಯಾಗುವ ಸನ್ನಿವೇಶಗಳಲ್ಲಿ ಆರೋಪಮಾಡುವವರು ಮತ್ತು ಆರೋಪಕ್ಕೆ ಗುರಿಯಾಗುವವರು ಪರಸ್ಪರ ವಿರುದ್ಧವಾದ ಎರಡು ನೆಲೆಗಳಲ್ಲಿರುತ್ತಾರೆ. ಆರೋಪವನ್ನು ಮಾಡುವವರು

ಸಾಮಾನ್ಯವಾಗಿ ಕುಟುಂಬದ ಜವಾಬ್ದಾರಿಯನ್ನು ಹೊತ್ತ, ಹಣಕಾಸಿನ ನಿರ್ವಹಣೆಯಲ್ಲಿ ಅಧಿಕಾರವುಳ್ಳ ವ್ಯಕ್ತಿಯಾಗಿರುತ್ತಾರೆ ಹಾಗೂ ವಯಸ್ಸಿನಲ್ಲಿ ಹಿರಿಯರಾಗಿರುತ್ತಾರೆ. ಆರೋಪಕ್ಕೆ ಗುರಿಯಾಗುವವರು ಹೆಚ್ಚಿನ ಸಂದರ್ಭಗಳಲ್ಲಿ ಕಿರಿಯರಾಗಿರುತ್ತಾರೆ ಹಾಗೂ ತಮ್ಮ ಜೀವನದ ಆಗುಹೋಗುಗಳಿಗೆ ಸಂಪೂರ್ಣವಾಗಿ ಕುಟುಂಬದ ಯಜಮಾನ ಅಥವಾ ಯಜಮಾನಿಯ ಸಂಪನ್ಮೂಲಗಳನ್ನೇ ಅವಲಂಬಿಸಿರುತ್ತಾರೆ. ಕುಟುಂಬದ ಪರಿಧಿಯಲ್ಲಿ ಇವರು ಎರಡನೇ ದರ್ಜೆಯ ವ್ಯಕ್ತಿಗಳಾಗಿರುತ್ತಾರೆ.

ವಿವಾದಗಳುಂಟಾದಾಗ ಆರೋಪಕ್ಕೆ ಗುರಿಯಾದ ವ್ಯಕ್ತಿಗಳು ತಾವಾಗಿಯೇ ಆಣೆಗಳನ್ನಿಡುತ್ತಾ ಆರೋಪದ ನಿರಾಕರಣೆಯಲ್ಲಿ ತೊಡಗುತ್ತಾರೆ. ಆರೋಪಿಯ ಬಾಯಿಂದ ಆಣೆಗಳನ್ನು ಕೇಳುತ್ತಿದ್ದಂತೆಯೇ ಆರೋಪವನ್ನು ಮಾಡಿದವರು ಕೆಲವು ಸಂದರ್ಭಗಳಲ್ಲಿ ವಿವಾದಗಳನ್ನು ಮೊಟಕುಗೊಳಿಸಿ, ಆರೋಪಿಗೆ ತಿಳಿಯಹೇಳಿ, ಮತ್ತೆ ಇಂತಹ ತಪ್ಪನ್ನು ಮಾಡದಂತೆ ಎಚ್ಚರಿಸುತ್ತಾರೆ. ಕೆಲವೊಮ್ಮೆ ಭಾಗಿಗಳ ನಡುವೆ ದ್ವೇಷ, ಅಸೂಯೆ, ಅನುಮಾನಗಳಂಥ ಪೂರ್ವಗ್ರಹಗಳಿದ್ದಲ್ಲಿ, ವಿವಾದ ಮತ್ತಷ್ಟು ಬಿಗಡಾಯಿಸಿ, ಆರೋಪಿಯನ್ನು ಪ್ರಮಾಣಮಾಡುವಂತೆ ಒತ್ತಾಯಿಸುತ್ತಾರೆ. ತಂದೆ-ತಾಯಿಗಳ ಮುಂದೆ ಮಕ್ಕಳು ಆಣೆಗಳನ್ನು ಇಡತೊಡಗಿದಾಗ ಹೆತ್ತವರು ಆತಂಕಕ್ಕೆ ಒಳಗಾಗುತ್ತಾರೆ. ತಮ್ಮ ಮಕ್ಕಳು ನಿಜಸಂಗತಿಯನ್ನು ಮುಚ್ಚಿಟ್ಟು, ಸುಳ್ಳನ್ನಾಡುತ್ತಾ, ಅದಕ್ಕೆ ಪೂರಕವಾಗಿ ಇಡುತ್ತಿರುವ ಆಣೆಗಳಿಂದ ಅಥವಾ ಮಾಡುತ್ತಿರುವ ಪ್ರಮಾಣಗಳಿಂದ, ಇಂದಲ್ಲ ನಾಳೆ ಅವರಿಗೆ ಕೇಡಾಗಬಹುದೆಂಬ ಭಯದಿಂದ ಸಂಕಟಕೊಳಗಾಗುತ್ತಾರೆ. ಇದೆಲ್ಲವೂ ಆಯಾಯ ಕುಟುಂಬದ ಸಾಮಾಜಿಕ ಅಂತಸ್ತಿಗೆ ತಕ್ಕಂತೆ ನಡೆಯುತ್ತದೆ. ಒಟ್ಟಿನಲ್ಲಿ ಕುಟುಂಬದ ನೆಲೆಯಲ್ಲಿ ಬಳಕೆಯಾಗುವ ಆಣೆ-ಪ್ರಮಾಣಗಳಿಂದ ವ್ಯಕ್ತಿಗಳ ನಡುವಣ ಪರಸ್ಪರ ಪ್ರೀತಿ, ವಿಶ್ವಾಸ ನಂಬಿಕೆಯ ಸಂಬಂಧಗಳು ಶಿಥಿಲಗೊಳ್ಳುತ್ತವೆ.

ದುಡಿಮೆಯ ನೆಲೆ :

ಮನೆಗಳಲ್ಲಿ, ಹೊಲಗದ್ದೆಗಳಲ್ಲಿ, ಕಾರ್ಖಾನೆಗಳಲ್ಲಿ, ಕಛೇರಿಗಳಲ್ಲಿ ಮತ್ತು ಇನ್ನಿತರ ನೂರಾರು ಕ್ಷೇತ್ರಗಳಲ್ಲಿ ಕೆಲಸಮಾಡುತ್ತಿರುವ ವ್ಯಕ್ತಿಗಳ, ಅವರ ಮೇಲ್ಪಟ್ಟವರ ನಡುವೆ ಸಮಸ್ಯೆಗಳುಂಟಾದಾಗ, ಹಲವು ಸಂದರ್ಭಗಳಲ್ಲಿ ಆಣೆ-ಪ್ರಮಾಣಗಳು

ಬಳಕೆಯಾಗುತ್ತವೆ. ಈ ನೆಲೆಯಲ್ಲಿ ಆರೋಪವನ್ನು ಮಾಡುವವರು ಅಧಿಕಾರ, ಸಂಪತ್ತು, ದೈಹಿಕ ಶಕ್ತಿ, ಜನಬಲ ಮತ್ತು ಜಾತಿಬಲವುಳ್ಳವರಾಗಿರುತ್ತಾರೆ. ಈ ಅಂಶಗಳಲ್ಲಿ ಯಾವುದಾದರೂ ಒಂದು ಅಥವಾ ಅನೇಕ ಅಥವಾ ಎಲ್ಲವೂ ಜತೆಗೂಡಿರುತ್ತವೆ. ಆರೋಪಕ್ಕೆ ಗುರಿಯಾದವರು ಅತಿ ಹೆಚ್ಚಿನ ಸಂದರ್ಭಗಳಲ್ಲಿ ಕೆಳ ಹಂತಗಳಲ್ಲಿ ದುಡಿಯುವ ಬಡ ವರ್ಗದ ಜನರಾಗಿರುತ್ತಾರೆ. ಈ ನೆಲೆಯಲ್ಲಿ ಭಾಗಿಗಳ ಹಿರಿತನ-ಕಿರಿತನಗಳು ಮುಖ್ಯವಾಗುವುದಿಲ್ಲ.

ದುಡಿಮೆಯ ನೆಲೆಯಲ್ಲಿ ಯಾವುದೇ ಬಗೆಯ ವಸ್ತುಗಳು ಅಥವಾ ಸಂಪತ್ತು ಕಾಣೆಯಾದಾಗ, ಕಾರ್ಯ ನಿರ್ವಹಣೆಯಲ್ಲಿ ತಪ್ಪುಗಳು ಅಥವಾ ಅನುಮಾನಗಳು ಉಂಟಾದಾಗ, ಮರುಕ್ಷಣದಲ್ಲಿಯೇ ಕೆಳಹಂತದಲ್ಲಿರುವ ಕೆಲಸಗಾರರು ಆರೋಪಕ್ಕೆ ಗುರಿಯಾಗುತ್ತಾರೆ. ಇದುವರೆಗಿನ ಅವರ ಒಳ್ಳೆಯ ನಡೆ ನುಡಿಗಳು ಗೌಣವಾಗುತ್ತವೆ. ಒಡೆಯ ಅಥವಾ ಒಡತಿಯ ಮುಂದೆ ಆಳುಗಳು ಹಾಗೂ ಉನ್ನತ ಅಧಿಕಾರಿಯ ಮುಂದೆ ಕೆಳದರ್ಜೆಯ ನೌಕರರು ಬಹಳ ದೀನತೆಯಿಂದ ತಗ್ಗಿ-ಬಗ್ಗಿ ಮೊರೆಯಿಡುತ್ತಾ, ತಮ್ಮ ಮೇಲೆ ಬಂದಿರುವ ಆರೋಪದಿಂದ ಪಾರಾಗಲು ನಾನಾ ವಿಧವಾದ ಆಣೆಗಳನ್ನಿಡಲು ಮತ್ತು ಪ್ರಮಾಣಗಳನ್ನು ಮಾಡಲು ಮುಂದಾಗುತ್ತಾರೆ. ಆರೋಪಕ್ಕೆ ಗುರಿಯಾದವರು, ಈ ಸಂದರ್ಭದಲ್ಲಿ ಮುಗ್ಧರಾಗಿರಲಿ ಅಥವಾ ವಂಚಕರಾಗಿರಲಿ, ಅದರಿಂದ ಮುಕ್ತರಾಗಲು ಇರುವ ಒಂದೇ ಒಂದು ದಾರಿಯೆಂದರೆ ಆಣೆಯಿಡುವುದು ಮತ್ತು ಪ್ರಮಾಣಮಾಡುವುದಾಗಿರುತ್ತದೆ. ಆದರೆ ಕೆಳವರ್ಗದ ಬಡ ಜನತೆ ಬಳಸುವ ಯಾವುದೇ ಬಗೆಯ ಆಣೆ-ಪ್ರಮಾಣಗಳನ್ನು ಬಹುತೇಕ ಸಂದರ್ಭಗಳಲ್ಲಿ ಮೇಲಿನ ವರ್ಗದವರು ಕಿಂಚಿತ್ತಾದರೂ ನಂಬುವುದಿಲ್ಲ ಹಾಗೂ ಗೌರವಿಸುವುದಿಲ್ಲ. ''ದನ ತಿನ್ನೂರ್ಗೆ ಗೊಬ್ಬರದಾಣೆ ಬ್ಯಾರೆ ಕೇಡು'' ಎಂದು ಹಂಗಿಸುತ್ತಾರೆ. ಆರೋಪಿಗಳಿಗೆ ತಾವೇ ಹೊಡೆದು ನೋಯಿಸಲು ಅಥವಾ ಊರಿನ ಮುಖಂಡರಿಂದ ಪಂಚಾಯ್ತಿ ಮಾಡಿಸಿ ದಂಡಹಾಕಿಸಲು ಅಥವಾ ಕಾನೂನಿನ ಪ್ರಕಾರ ಶಿಕ್ಷೆಯಾಗಲೆಂದು ಪೊಲೀಸರಿಗೆ ಒಪ್ಪಿಸಲು ಮುಂದಾಗುತ್ತಾರೆ. ಇದು ಸಮಯ ಸಂದರ್ಭವನ್ನು ಅವಲಂಬಿಸಿರುತ್ತದೆ.

ಇತರರಿಂದ ಒತ್ತಾಯಪೂರ್ವಕವಾಗಿ ಆಣೆಯನ್ನು ಇಡಿಸುವ ಮತ್ತು ಪ್ರಮಾಣವನ್ನು ಮಾಡಿಸುವ ಕ್ರಿಯೆಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಅಧಿಕಾರದ ಶಕ್ತಿ,

ಶ್ರೀಮಂತಿಕೆಯ ದರ್ಪ ಅಥವಾ ಜಾತಿಯ ಬಲ ಪ್ರದರ್ಶನದ ಸಾಂಕೇತಿಕ ಕ್ರಿಯೆಗಳಾಗಿರುತ್ತವೆಯೆಂದು ಸಾಮಾಜಿಕ ಮನೋವಿಜ್ಞಾನಿಗಳು ವ್ಯಾಖ್ಯಾನಿಸಿದ್ದಾರೆ.

ಸಾರ್ವಜನಿಕ ನೆಲೆ :

ಬಸ್ಸು ಮತ್ತು ರೈಲು ನಿಲ್ದಾಣಗಳು, ಹೋಟೆಲುಗಳು, ಅಂಗಡಿ ಮುಂಗಟ್ಟುಗಳು ಮತ್ತು ಚಲನಚಿತ್ರ ಮಂದಿರಗಳನ್ನೊಳಗೊಂಡಂತೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ನೆರೆಯುವ ಸ್ಥಳಗಳಲ್ಲಿ ಆಗಿಂದಾಗ್ಗೆ ಕೇಳಿಬರುವ ಮಾತಿನ ಘರ್ಷಣೆಯ ಸಂದರ್ಭಗಳಲ್ಲಿ ಯಾರಾದರೂ ಆಣೆ-ಪ್ರಮಾಣಗಳನ್ನು ಬಳಸುತ್ತಿರುವುದನ್ನು ಕಂಡಾಗ, ಬಹುತೇಕ ಸಂದರ್ಭಗಳಲ್ಲಿ ಅಂತಹವರನ್ನು ನಿಜಕ್ಕೂ ಆರೋಪಿಗಳೆಂದೇ ಇತರರು ಭಾವಿಸುತ್ತಾರೆ. ಏಕೆಂದರೆ ಆಣೆ-ಪ್ರಮಾಣ ಮಾಡುವವರಲ್ಲಿ ಬಹಳಷ್ಟು ಮಂದಿ ಸುಳ್ಳರು, ವಂಚಕರು, ಸಮಯಸಾಧಕರೆಂಬ ಭಾವನೆಯು ಜನಮನದಲ್ಲಿ ನೆಲೆಸಿದೆ. ಘಟನೆ ನಡೆಯುವ ಸ್ಥಳವೂ ಅಂಥ ಭಾವನೆಗೆ ಕಾರಣವಾಗುತ್ತದೆ.

ಈ ಮೂರು ನೆಲೆಗಳಲ್ಲೂ ಆರೋಪಕ್ಕೆ ಗುರಿಯಾದವರಲ್ಲಿ ನಿರಪರಾಧಿಗಳಾದವರು ತಮ್ಮ ವ್ಯಕ್ತಿತ್ವಕ್ಕೆ ತಟ್ಟಿದ ಕಳಂಕದಿಂದ ಅಪಮಾನಗೊಂಡು ಮಾನಸಿಕವಾಗಿ ಕುಸಿದಿದ್ದರೂ, ಧೈರ್ಯದಿಂದ ಆಣೆ-ಪ್ರಮಾಣಗಳನ್ನು ಬಳಸುತ್ತಾರೆ. ಆದರೆ ಕಳ್ಳತನ, ವಂಚನೆ, ದ್ರೋಹ ಮತ್ತು ಇನ್ನಿತರ ತಪ್ಪುಗಳನ್ನು ಎಸಗಿಯೂ ಆಣೆ-ಪ್ರಮಾಣಗಳನ್ನು ಬಳಸುವವರಲ್ಲಿ ವಿಭಿನ್ನ ಮನೋಧರ್ಮದ ವ್ಯಕ್ತಿಗಳು ಕಂಡುಬರುತ್ತಾರೆ.

''ಈ ಆಣೆ-ಪ್ರಮಾಣಗಳೆಲ್ಲವೂ ಸುಳ್ಳು. ಇವುಗಳ ಬಳಕೆಯಿಂದ ಭವಿಷ್ಯದಲ್ಲಿ ಯಾವ ಕಷ್ಟ-ನಷ್ಟಗಳು ಉಂಟಾಗುವುದಿಲ್ಲ. ಇತರ ವ್ಯವಹಾರಗಳಲ್ಲಿ ಬಳಸಿದ ಮಾತುಗಳು ಹೇಗೆ ಕೆಲಸವಾದ ನಂತರ ಮರೆಯಾಗುತ್ತವೆಯೋ, ಅಂತೆಯೇ ಇವು ಕೂಡ ತತ್ಕಾಲದ ಕಾರ್ಯಸಾಧನೆಗಾಗಿ ಬಳಕೆಯಾಗುವ ಮಾತುಗಳು'' ಎಂಬ ನಿಲುವು ಕೆಲವರಲ್ಲಿದೆ. ಇಂತಹವರು ಯಾವುದೇ ಬಗೆಯ ಆಣೆ-ಪ್ರಮಾಣಗಳನ್ನು ಬಳಸುತ್ತಿದ್ದರೂ ಅದೇ ಗಳಿಗೆಯಲ್ಲಿ ಅಂತರಂಗದ ಮನದಲ್ಲಿ ತಾವು ನಂಬಿದ ದೇವರಲ್ಲಿ ತಮ್ಮ ಅಪರಾಧವನ್ನು ಮನ್ನಿಸಿ ಕಾಪಾಡುವಂತೆ

ಮೊರೆಯಿಡುವುದಾಗಿ ಹೇಳಿಕೊಳ್ಳುತ್ತಾರೆ. ಇನ್ನು ಕೆಲವರು ಆಣೆ-ಪ್ರಮಾಣಗಳ ಬಳಕೆಯಿಂದ ಭವಿಷ್ಯದಲ್ಲಿ ಉಂಟಾಗುವ ಯಾವುದೇ ಪರಿಣಾಮಗಳ ಬಗ್ಗೆ ಏನನ್ನೂ ಚಿಂತಿಸದೆ, ತತ್ಕಾಲದ ಕಾರ್ಯಸಾಧನೆಗಾಗಿ ಅವನ್ನು ಸಲೀಸಾಗಿ ಬಳಸುತ್ತಾರೆ. ಮುಂದೆ ಬರಲಿರುವ ಕಷ್ಟ-ನಷ್ಟಗಳಿಗಿಂತ ಈಗ ತಮಗುಂಟಾದ ಪ್ರಯೋಜನ ಇಂತಹವರ ಪಾಲಿಗೆ ಮುಖ್ಯವಾಗಿರುತ್ತದೆ. ಕೆಲವು ಸಲ ಇದು ಭ್ರಮೆಯಾಗಬಹುದು.

ಮಾಡಿದ ಅಪರಾಧವನ್ನು ಅಥವಾ ತಪ್ಪನ್ನು ಮುಚ್ಚಿಡಲೆಂದು ಆಣೆ-ಪ್ರಮಾಣ ಮಾಡಿದ ಕೆಲವರು, ಆ ಸಮಯದಲ್ಲಿ ಆಪತ್ತಿನಿಂದ ಪಾರಾಗಿದ್ದರೂ ಮುಂದೆ ಎಂದಾದರೊಂದು ದಿನ ಕಷ್ಟ-ನಷ್ಟಗಳಿಗೆ ಸಿಲುಕಿದಾಗ, ಅದಕ್ಕೂ ಮತ್ತು ಈ ಹಿಂದೆ ಇವರು ಮಾಡಿದ್ದ ಆಣೆ-ಪ್ರಮಾಣಕ್ಕೂ ಪರಸ್ಪರ ಸಂಬಂಧವನ್ನು ಇತರರು ಗಂಟು ಹಾಕುತ್ತಾರೆ. ''ಜನರಿಗೆ ಮೋಸ ಮಾಡಬಹುದು, ಆದರೆ ದೇವರಿಗೆ ಮೋಸ ಮಾಡೋಕಾಗುತ್ತ!'' ಎಂದು ಹಿಂದೆ ಆಡಿಕೊಳ್ಳುತ್ತಾರೆ. ಆಣೆ-ಪ್ರಮಾಣ ಗಳಿಗೆ ಒಂದು ಬಗೆಯ ವಿಶಿಷ್ಟವಾದ ಮಾಂತ್ರಿಕಶಕ್ತಿಯಿದೆ ಎಂಬ ನಂಬಿಕೆಯು ಇಂತಹ ಮಂದಿಯ ಮನದಲ್ಲಿವೆ. ಈ ಮಾಂತ್ರಿಕತೆ ಮನೋಸ್ಥೈರ್ಯವನ್ನು ಅಲ್ಲಾಡಿಸುತ್ತದೆ.

ಸಂವಿಧಾನದತ್ತ ಸಂಸ್ಥೆಗಳಾದ ವಿಧಾನಸಭೆ, ಲೋಕಸಭೆ ಮತ್ತು ಇತರ ಕಡೆಗಳಲ್ಲಿ ವ್ಯಕ್ತಿಗಳು ಅಧಿಕಾರದ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಸಂದರ್ಭಗಳಲ್ಲಿ ದೇವರ ಅಥವಾ ಸತ್ಯದ ಹೆಸರಿನಲ್ಲಿ ಪ್ರಮಾಣ ಮಾಡುತ್ತಾರೆ. ಆದರೆ ಪ್ರಮಾಣವಚನದಲ್ಲಿನ ತಾತ್ತ್ವಿಕ ವಿಚಾರಗಳಿಗೆ ಅನುಗುಣವಾಗಿ ನಡೆದುಕೊಳ್ಳುವ ಅಧಿಕಾರಸ್ಥರ ಸಂಖ್ಯೆ ಬಹಳ ಕಡಿಮೆಯಾಗಿರುತ್ತದೆ. ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ಮುಂದೆ ಜನರು ಯಾವುದೇ ಮೊಕದ್ದಮೆಗೆ ಸಂಬಂಧಪಟ್ಟಂತೆ ಸಾಕ್ಷ್ಯ ಅಥವಾ ಹೇಳಿಕೆಯನ್ನು ನೀಡುವುದಕ್ಕೆ ಮೊದಲು ತಾವು ಹೇಳುವುದೆಲ್ಲಾ ಸತ್ಯವೆಂದು ದೇವರ ಹೆಸರಿನಲ್ಲಿ ಅಥವಾ ಭಗವದ್ಗೀತೆ ಮುಟ್ಟಿ ಪ್ರಮಾಣ ಮಾಡುತ್ತಾರೆ. ಆದರೆ ಬಹುತೇಕ ಮೊಕದ್ದಮೆಗಳಲ್ಲಿ ಜನರು ನೀಡುವ ಹೇಳಿಕೆಗಳು ಅವರ ವಕೀಲರು ತರಬೇತಿ ಕೊಟ್ಟ ರೀತಿಯಲ್ಲಿಯಲ್ಲಿರುತ್ತವೆಯೇ ಹೊರತು, ಸಂಪೂರ್ಣ ಸತ್ಯವಾಗಿರುವುದಿಲ್ಲ. ಈ ರೀತಿ ಆಧುನಿಕ ಸಮಾಜದ ಸಂಘ-ಸಂಸ್ಥೆಗಳಲ್ಲಿ ಬಳಕೆಯಾಗುವ ಆಣೆ-ಪ್ರಮಾಣಗಳು ನಿರ್ದಿಷ್ಟ

ಸಂದರ್ಭಗಳಲ್ಲಿ ನಡೆಯಲೇಬೇಕಾದ ಆಚರಣೆಗಳಾಗಿರುವದರಿಂದ (rituals), ಯಾವುದೇ ವಿಶೇಷವಾದ ಪರಿಣಾಮಗಳನ್ನು ಬೀರದೆ, ಕೇವಲ ಯಾಂತ್ರಿಕವಾಗಿ ನಡೆಯುವ ಕ್ರಿಯೆಗಳಾಗುತ್ತವೆ. ಇಂಥ ಸಂದರ್ಭಗಳಲ್ಲಿ ಆಣೆ ಪ್ರಮಾಣದ ಆಚರಣೆಯ ಗಾಂಭೀರ್ಯ ಕಣ್ಮರೆಯಾಗುತ್ತದೆ.

ನಾಗರಿಕ ಸಮಾಜದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣವನ್ನು ಪಡೆಯುತ್ತಿರುವ ಹದಿಹರೆಯದ ಮಕ್ಕಳಲ್ಲಿ ಕೆಲವರು ತಮ್ಮ ನಿತ್ಯ ಸಂಭಾಷಣೆಯಲ್ಲಿ "ಗಾಡ್ ಪ್ರಾಮಿಸ್... ಮದರ್ ಪ್ರಾಮಿಸ್" ಎಂಬ ಪದಗಳನ್ನು ಕನ್ನಡದ ಆಣೆಗಳ ಸ್ಥಾನದಲ್ಲಿ ಬಳಸುವುದು ಕಂಡುಬರುತ್ತದೆ. ಇದು ಯಾಂತ್ರಿಕ ಮಾತುಗಾರಿಕೆಯಾಗಿದೆ.

ಸಾಮಾಜಿಕವಾಗಿ ಉನ್ನತ ಸ್ಥಾನಮಾನಗಳನ್ನು ಹೊಂದಿರುವ ವ್ಯಕ್ತಿಗಳು ಮಾತಿನ ಸಂದರ್ಭಗಳಲ್ಲಿ ಹಾಸ್ಯದ ಬುಗ್ಗೆಯನ್ನು ಚಿಮ್ಮಿಸಲೆಂದು ಅಥವಾ ತಮ್ಮ ವ್ಯಕ್ತಿತ್ವದ ವಿಶೇಷ ಛಾಪನ್ನು ಮೂಡಿಸಲೆಂದು ಸಭೆ-ಸಮಾರಂಭಗಳಲ್ಲಿ ಕೆಲವು ಸಾರಿ ಆಣೆ-ಪ್ರಮಾಣಗಳನ್ನು ಬಳಸುವುದು ಉಂಟು.

ಉದಾಹರಣೆ :

ಪ್ರಸಂಗ - 6

ಬೆಂಗಳೂರಿನಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ 'ಶನಿವಾರ ಸಂತೆ'ಯ ಪುಸ್ತಕ ಮಾರಾಟ ಮಳಿಗೆಗಳ ನಡುವೆ ಎರಡು ಪುಸ್ತಕಗಳ ಬಿಡುಗಡೆಯ ಸಮಾರಂಭವೊಂದು ಏರ್ಪಾಡಾಗಿತ್ತು. ಸುಮಾರು ಇಪ್ಪತ್ತು ಮಂದಿ ಸಭಿಕರ ಮುಂದೆ ಪುಸ್ತಕಗಳನ್ನು ಬಿಡುಗಡೆ ಮಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಪಾಟೀಲರು ಹೊಸ ಪುಸ್ತಕಗಳನ್ನು ಕೈಗಳಲ್ಲಿ ಎತ್ತಿ ಹಿಡಿದುಕೊಂಡು ಸಭಿಕರಿಗೆ ತೋರಿಸುತ್ತಾ "ದೇವರಾಣೆಯಾಗಿಯೂ ಈ ಪುಸ್ತಕಗಳನ್ನು ನಾನು ಓದಿಲ್ಲ. ಆದರೆ ಇನ್ನು ಕೆಲವೇ ದಿನಗಳಲ್ಲಿ ಇವನ್ನು ಓದಿ, ಲೇಖಕರಿಗೆ ನನ್ನ ಅಭಿಪ್ರಾಯಗಳನ್ನು ತಿಳಿಸುತ್ತೇನೆ" ಎಂದಾಗ, ಅಲ್ಲಿದ್ದವರೆಲ್ಲ ಮುಗುಳ್ನಕ್ಕರು. ಅಭಿಪ್ರಾಯ ಸತ್ಯವಾಗಿದ್ದರೂ 'ಆಣೆ' ನಗೆಗೆ ಕಾರಣವಾಯಿತು. ಆಣೆ ಪ್ರಮಾಣಗಳನ್ನು ಹಾಸ್ಯಕ್ಕೆ ಬಳಸಿಕೊಳ್ಳುವ ಚಾಣಾಕ್ಷರೂ ಉಂಟು.

ಪ್ರಸಂಗ - 7

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಹನುಮಂತನಗರದ ದೇವಸ್ಥಾನವೊಂದರ ಆವರಣದಲ್ಲಿ ನಡೆದ ಸಾಂಸ್ಕೃತಿಕ ಸಮಾರಂಭಕ್ಕೆ ಅಂದು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಶ್ರೀ ವೀರಪ್ಪ ಮೋಯಿಲಿ ಅವರು ಅಧ್ಯಕ್ಷರಾಗಿ ಆಗಮಿಸಿದ್ದರು. ಸಭೆಯಲ್ಲಿ ಹತ್ತು ಸಾವಿರಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ರೈತಾಪಿ ಜನರು ಸೇರಿದ್ದರು. ವೀರಪ್ಪ ಮೊಯಲಿ ಅವರು ತಮ್ಮ ಭಾಷಣದ ಒಂದು ಹಂತದಲ್ಲಿ ಅತ್ಯಂತ ಉತ್ಸಾಹದಿಂದ ಎತ್ತರದ ಧ್ವನಿಯಲ್ಲಿ ''ಕರ್ನಾಟಕದ ಜೀವನದಿಯಾದ ಕಾವೇರಿ ಮಾತೆಯ ಮೇಲಾಣೆ.... ಮಂಡ್ಯ ಜಿಲ್ಲೆಯ ರೈತರಿಗೆ ನೀರಿನ ಹಂಚಿಕೆಯಲ್ಲಿ ಅನ್ಯಾಯವಾಗದಂತೆ ನನ್ನ ಅಧಿಕಾರದ ಅವಧಿಯಲಿ ನೋಡಿಕೊಳ್ಳುತ್ತೇನೆ'' ಎಂದು ಘೋಷಿಸಿದಾಗ, ಸಭಿಕರೆಲ್ಲರೂ ಚಪ್ಪಾಳೆ ತಟ್ಟುತ್ತ, ಹರ್ಷೋದ್ಗಾರ ಮಾಡಿದರು. ಆಣೆ ಭರವಸೆಯ ಮಂತ್ರವೂ ಆಗಬಹುದೆಂಬುದಕ್ಕೆ ಇದು ಸಾಕ್ಷಿ.

ಸಾಮಾಜಿಕ ರಂಗದಲ್ಲಿನ ಎಲ್ಲಾ ಬಗೆಯ ವ್ಯವಹಾರಗಳಲ್ಲೂ ಆಗಿಂದಾಗ್ಗೆ ಆಣೆ-ಪ್ರಮಾಣಗಳನ್ನು ಬಳಸುವುದರಿಂದ ಅನೇಕ ಉದ್ದೇಶಗಳನ್ನು ಈಡೇರಿಸಿಕೊಳ್ಳಬಹುದಾದರೂ, ಈ ಭಾಷಿಕಕ್ರಿಯೆಗಳ ಬಗ್ಗೆ ಒಟ್ಟಾರೆಯಾಗಿ ಕನ್ನಡ ಮಾತಿನ ಸಮುದಾಯವು ನಕಾರಾತ್ಮಕವಾದ ಧೋರಣೆಯನ್ನೇ ಹೊಂದಿದೆ. ಅಪರಾಧ ಅಥವಾ ತಪ್ಪುಗಳನ್ನು ಮುಚ್ಚಿಡಲೆಂದು ಆಣೆಯಿಡುವುದರಿಂದ, ಪ್ರಮಾಣ ಮಾಡುವುದರಿಂದ ಉಂಟಾಗಬಹುದಾದ ಕೆಟ್ಟಪರಿಣಾಮಗಳ ಹೊಣೆಯನ್ನು ಹೊರಲು ಸಾಮಾಜಿಕವಾಗಿ, ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ವ್ಯಕ್ತಿಗಳು ಹಿಂಜರಿಯುತ್ತಾರೆ. ಆದ್ದರಿಂದ ಇಂತಹವರ ದೃಷ್ಟಿಯಲ್ಲಿ -

''ಯಾವುದೇ ವ್ಯಕ್ತಿಯು ಯಾವುದೇ ರೀತಿಯ ಮಾತಿನ ಸಂದರ್ಭದಲ್ಲಾಗಲಿ ಇತರರನ್ನು ನಂಬಿಸ[illegible] ತಾನು ಹೇಳುತ್ತಿರುವ ವಿಷಯ 'ಹೌದು' ಎಂದಾದರೆ 'ಹೌದು' ಎಂದು ಹೇಳಬೇಕು; 'ಇಲ್ಲ' ಎಂದಾದರೆ 'ಇಲ್ಲ' ಎಂದು ಹೇಳಬೇಕು. ಇಷ್ಟಲ್ಲದೆ ಇದಕ್ಕೆ ಯಾವುದೇ ಆಣೆ-ಪ್ರಮಾಣಗಳ ಬೆಂಬಲ ಬೇಕಾಗಿಲ್ಲ. ಯಾರು ಆಣೆ-ಪ್ರಮಾಣಗಳ ಮೂಲಕವೇ ನಂಬಿಕೆಗೆಪಾತ್ರರಾಗಲು ಪ್ರಯತ್ನಿಸುತ್ತಾರೆಯೋ ಅವರು ಆತ್ಮಗೌರವವಿಲ್ಲದವರು, ತಮ್ಮ ವ್ಯಕ್ತಿತ್ವವನ್ನು ತಾವೇ ಕುಗ್ಗಿಸಿಕೊಂಡವರು ಮತ್ತು ಸಾಮಾಜಿಕ ಮನ್ನಣೆಯಿಲ್ಲದವರು'' ಎಂಬ ಹೇಳಿಕೆಯಲ್ಲಿ ಮನನೀಯ ಅಂಶಗಳಿವೆ.

ಮಾನವನ ಸಾಮಾಜಿಕ ವ್ಯವಹಾರದ ದೈನಂದಿನ ಮಾತುಕತೆಗಳಲ್ಲಿ ಆಣೆ-ಪ್ರಮಾಣಗಳು ಹಾಸುಹೊಕ್ಕಾಗಿರುವುದನ್ನು ಪ್ರಾಚೀನ ಕನ್ನಡ ಕವಿಗಳು ತಮ್ಮ ಕೃತಿಗಳಲ್ಲಿನ ನಾನಾ ಸನ್ನಿವೇಶಗಳಲ್ಲಿ ಬಹು ಬಗೆಯ ಪಾತ್ರಗಳ ಮೂಲಕ ದಾಖಲಿಸಿದ್ದಾರೆ. ಅವುಗಳಲ್ಲಿ ಒಂದೆರಡನ್ನು ಈಗ ಪರಿಶೀಲನೆಗೆ ಇಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಕ್ರಿ.ಶ. 12ನೇ ಶತಮಾನದಲ್ಲಿದ್ದ ಹರಿಹರ ಕವಿಯು ರಚಿಸಿರುವ 'ತಿರುನೀಲಕಂಠ ರಗಳೆ'ಯು ಸಂಪೂರ್ಣವಾಗಿ ಆಣೆ-ಪ್ರಮಾಣಗಳ ಕ್ರಿಯಾತ್ಮಕ ಘಟನೆಗಳಿಂದ ಹೆಣೆದುಕೊಂಡಿದೆ.

ಚೋಳದೇಶದ ವ್ಯಾಪ್ತಿಯಲ್ಲಿ ಬರುವ ಪೊನ್ನಾಂಬಲ ಎಂಬ ಪುರದಲ್ಲಿ ಹದಿನಾರರ ಹರೆಯದ ತಿರುನೀಲಕಂಠ ಮತ್ತು ಮುತ್ತೈದೆ ಎಂಬ ಹೆಸರಿನ ಶಿವಭಕ್ತ ದಂಪತಿಗಳಿದ್ದರು. ಮಹಾ ಶಿವಭಕ್ತನಾಗಿದ್ದ ತಿರುನೀಲಕಂಠನು ಒಂದು ದಿನ ಮಧ್ಯರಾತ್ರಿಯ ತನಕ ದೇಗುಲದಲ್ಲಿ ಶಿವನನ್ನು ಆರಾಧಿಸುತ್ತಿದ್ದು ಮನೆಗೆ ಹಿಂತಿರುಗಿ ಬರುವಾಗ, ವಿಳಾಸಿನಿಯೊಬ್ಬಳು ಊಟ ಮಾಡಿದ ತಟ್ಟೆಯ ಎಂಜಲ ನೀರನ್ನು ತನ್ನ ಮನೆಯ ಉಪ್ಪರಿಗೆಯಿಂದ ಹೊರಕ್ಕೆ ಎರಚುತ್ತಾಳೆ. ಅದೇ ಸಮಯದಲ್ಲಿ ಶಿವನಾಮ ಸ್ಮರಣೆಮಾಡುತ್ತಾ ಪುರದ ಬೀದಿಯಲ್ಲಿ ನಡೆದುಬರುತ್ತಿದ್ದ ತಿರುನೀಲಕಂಠನ ಮೈಮೇಲೆ ಎಂಜಲನೀರು ಬೀಳುತ್ತದೆ. ಇದನ್ನು ಕಂಡ ವಿಳಾಸಿನಿಯು ತನ್ನಿಂದ ಆದ ಅನಾಹುತಕ್ಕಾಗಿ ಪರಿತಪಿಸುತ್ತಾ, ಉಪ್ಪರಿಗೆಯಿಂದ ಇಳಿದು ಬಂದು ತಿರುನೀಲಕಂಠನನ್ನು ತನ್ನ ಮನೆಯೊಳಕ್ಕೆ ಕರೆದೊಯ್ದು ಪರಿಮಳಯುಕ್ತ ದ್ರವ್ಯಗಳಿಂದ ಸ್ನಾನ ಮಾಡಿಸಿ, ಬೆಲೆಬಾಳುವ ಬಟ್ಟೆಗಳನ್ನು ಉಡಿಸಿ, ದಿವ್ಯಗಂಧಗಳನ್ನು ಲೇಪಿಸಿ, ಕರ್ಪೂರದ ವೀಳ್ಯವನ್ನು ನೀಡಿ ಗೌರವದಿಂದ ಕಳುಹಿಸುತ್ತಾಳೆ.

ಅಂದಚೆಂದದ ಅಲಂಕಾರ ವಸ್ತುಗಳಿಂದ ಶೋಭಿತನಾಗಿ ಮನೆಗೆ ಬಂದ ತಿರುನೀಲಕಂಠನ ಬಹಿರಂಗದ ಸೊಗಸನ್ನು ಕಂಡ ಮಡದಿ ಮುತ್ತೈದೆಯು ಗಂಡನ ಶೀಲದ ಬಗ್ಗೆ ಶಂಕಿತಳಾಗಿ, ಮನದೊಳಗೆ ಆತಂಕಗೊಳ್ಳುತ್ತಾಳೆ. ಆದರೆ ತನ್ನ ಅಂತರಂಗದ ಭಾವನೆಗಳನ್ನು ಹೊರಗೆ ತೋರಿಸಿಕೊಳ್ಳದೆ, ಎಂದಿನಂತೆ ಗಂಡನಿಗೆ ಉಣಬಡಿಸಿ ಉಪಚಾರ ಮಾಡಿ ಮಲಗಿಕೊಂಡಾಗ, ತಿರುನೀಲಕಂಠನು ಕಾಮಾನುರಾಗದಿಂದ ತನ್ನ ಹೆಂಡತಿಯ ಮೈಮೇಲೆ ಕೈಯಿಡುತ್ತಾನೆ. ಇದರಿಂದ ಸಿಡಿಮಿಡಿಗೊಂಡ ಮುತ್ತೈದೆಯು ಕೆರಳಿ ಕೆಂಡವಾಗಿ ''ಮುಟ್ಟಿದೊಡೆ ಶಿವನಾಣೆ'' ಎನ್ನುತ್ತಾ, ತನ್ನ ಮೈಮೇಲಿದ್ದ ತಿರುನೀಲಕಂಠನ ಕೈಯನ್ನು ಕಿತ್ತೆಸೆಯುತ್ತಾಳೆ.

ಶಿವಭಕ್ತನಾಗಿದ್ದ ತಿರುನೀಲಕಂಠನಿಗೆ ಹೆಂಡತಿಯಾಡಿದ ಆಣೆಯ ಮಾತುಗಳು ಮಾನಸಿಕವಾಗಿ ಆಘಾತವನ್ನುಂಟುಮಾಡಿದರೂ, ಆ ಗಳಿಗೆಯಿಂದಲೇ ಹೆಂಡತಿಯಿಕ್ಕಿದ ಆಣೆಯ ನುಡಿಗಳನ್ನೇ ಶಿವನ ಆಣೆಯೆಂದು ಸ್ವೀಕರಿಸಿ, ಅದರಂತೆಯೇ ನಡೆದುಕೊಳ್ಳಲು ನಿರ್ಧರಿಸುತ್ತಾನೆ. ತಿರುನೀಲಕಂಠ-ಮುತ್ತೈದೆ ದಂಪತಿಗಳು ಪರಸ್ಪರ ಒಬ್ಬರನ್ನೊಬ್ಬರು ಮುಟ್ಟದೆ ತಮ್ಮ ತೊಂಬತ್ತನೆಯ ವಯೋಮಾನದವರೆಗೂ ಆಣೆಗೆ ಭಂಗ ಬರದಂತೆ ದಾಂಪತ್ಯ ಜೀವನ ನಡೆಸುತ್ತಾರೆ. ದಂಪತಿಗಳ ಈ ಬಗೆಯ ನಡೆನುಡಿಗಳು ಹೊರಜಗತ್ತಿಗೆ ತಿಳಿಯದು.

ಶಿವನ ಹೆಸರಿನಲ್ಲಿ ಇಟ್ಟ ಆಣೆಗೆ ಬದ್ಧರಾಗಿ ನಡೆದುಕೊಳ್ಳುತ್ತಿದ್ದ ಈ ದಂಪತಿಗಳ ಶಿವಭಕ್ತಿಯ ಸ್ವರೂಪವನ್ನು ಹೊರಜಗತ್ತಿಗೆ ತಿಳಿಸಲೆಂಬ ಉದ್ದೇಶದಿಂದ ಭಿಕ್ಷುಕ ವೇಷಧಾರಿಯಾಗಿ ಪೊನ್ನಂಬಲ ಪುರಕ್ಕೆ ಬಂದ ಶಿವನು, ವಿಶೇಷವಾದ ಮಹಿಮೆಯುಳ್ಳ ಪಾತ್ರೆಯೊಂದನ್ನು ಸ್ವಲ್ಪ ಕಾಲ ಜೋಪಾನವಾಗಿ ರಕ್ಷಿಸಿಡುವಂತೆ ತಿರುನೀಲಕಂಠ ದಂಪತಿಗಳ ಪಾಲಿಗೆ ಒಪ್ಪಿಸಿ ತೆರಳುತ್ತಾನೆ. ದಂಪತಿಗಳು ಆ ಪಾತ್ರೆಯನ್ನು ದೊಡ್ಡ ಪೆಟ್ಟಿಗೆಯೊಂದರಲ್ಲಿಟ್ಟು, ಎಚ್ಚರದಿಂದ ಕಾವಲು ಕಾಯುತ್ತಿರುತ್ತಾರೆ. ಕೆಲ ದಿನಗಳ ನಂತರ ಭಿಕ್ಷುಕ ವೇಷಧಾರಿ ಶಿವನು ತನ್ನ ಪಾತ್ರೆಯನ್ನು ಹಿಂತಿರುಗಿ ಪಡೆಯಲೆಂದು ದಂಪತಿಗಳ ಬಳಿ ಬಂದು ಕೇಳಿದಾಗ, ದಂಪತಿಗಳು ಬಹಳ ಸಡಗರ-ಸಂತೋಷದಿಂದ ಪಾತ್ರೆಯನ್ನು ಹಿಂತಿರುಗಿಸಲೆಂದು ಪೆಟ್ಟಿಗೆಯನ್ನು ತೆರೆದಾಗ, ಪಾತ್ರೆಯು ಅಲ್ಲಿರಲಿಲ್ಲ. ಇದೆಲ್ಲಾ ಶಿವನು ಹೂಡಿದ ತಂತ್ರವಾಗಿತ್ತು. ಕುಪಿತನಾದ ವೇಷಧಾರಿ ಶಿವನು ಈ ವಿಷಯವನ್ನು ಪೊನ್ನಾಂಬಲದ ನ್ಯಾಯಪೀಠಕ್ಕೆ ಒಪ್ಪಿಸಿ, ಆರೋಪಿಗಳಿಂದ ತನ್ನ ಪಾತ್ರೆಯನ್ನು ಕೊಡಿಸಿಕೊಡಬೇಕೆಂದು ದೂರನ್ನು ಸಲ್ಲಿಸುತ್ತಾನೆ. ಶಿವಭಕ್ತರಾಗಿದ್ದ ತಿರುನೀಲಕಂಠ ದಂಪತಿಗಳ ಉತ್ತಮವಾದ ನಡೆನುಡಿಗಳನ್ನು ಅರಿತಿದ್ದ ನ್ಯಾಯಪೀಠದ ಮೂವರು ಸದಸ್ಯರು ದಂಪತಿಗಳನ್ನು ವಿಚಾರಣೆ ಮಾಡಿದಾಗ, "ಪಾತ್ರೆಯನ್ನು ಇವರು ಕೊಟ್ಟಿದ್ದು ಸತ್ಯ; ಆದರೆ ಅದು ಇಟ್ಟ ಜಾಗದಲ್ಲಿಯೇ ಕಣ್ಮರೆಯಾದುದು ಅಷ್ಟೇ ಸತ್ಯ. ಈಗ ಅವರು ನಮಗೆ ಏನು ಮಾಡಿದರೂ, ಅದನ್ನು ಅನುಭವಿಸಲು ನಾವು ಸಿದ್ಧರಾಗಿದ್ದೇವೆ." ಎಂದು ದಂಪತಿಗಳು ಉತ್ತರಿಸುತ್ತಾರೆ. ಆಗ ವೇಷಧಾರಿ ಶಿವನು ದಂಪತಿಗಳಿಗೆ ಒಂದು ಪ್ರಮಾಣವನ್ನು ಮಾಡಲು ಹೇಳುತ್ತಾನೆ. ನ್ಯಾಯಾಸ್ಥಾನದಲ್ಲಿ ನೆರೆದವರೆಲ್ಲರ ಮುಂದೆ ತಿರುನೀಲಕಂಠನು ತನ್ನ ಹೆಂಡತಿ ಮುತ್ತೈದೆಯ ಕೈಯನ್ನು

ಹಿಡಿದುಕೊಂಡು, ತಾವು ಪಾತ್ರೆಯನ್ನು ಕದ್ದಿಲ್ಲವೆಂದು ಘೋಷಿಸುತ್ತಾ, ನೀರಿನ ಕೊಂಡವೊಂದರಲ್ಲಿ ಮುಳುಗಿ ಮೇಲೇಳಬೇಕೆಂದು ವಿವರಿಸುತ್ತಾನೆ.

ಈ ಬಗೆಯ ಪ್ರಮಾಣದ ಆಚರಣೆಯನ್ನು ಆಚರಿಸಲಾಗದ ತಿರುನೀಲಕಂಠ ದಂಪತಿಗಳು ಧರ್ಮಸಂಕಟಕ್ಕೆ ಗುರಿಯಾಗುತ್ತಾರೆ. ಇತ್ತ ಹೆಂಡತಿಯ ಕೈಯನ್ನು ಹಿಡಿದರೆ ಆಣೆಯನ್ನು ಮೀರಿ ಶಿವನಿಗೆ ಅಪಚಾರವನ್ನು ಮಾಡಿದಂತಾಗುತ್ತದೆ. ಅತ್ತ ಕೈಹಿಡಿಯದಿದ್ದರೆ ನ್ಯಾಯಾಸ್ಥಾನದಲ್ಲಿ ನೆರೆದವರ ದೃಷ್ಟಿಯಲ್ಲಿ ಪಾತ್ರೆಯನ್ನು ಕದ್ದ ಕಳ್ಳರು ತಾವೆಂದು ಒಪ್ಪಿಕೊಂಡಂತಾಗುತ್ತದೆ. ಇಂತಹ ಇಬ್ಬಗೆಯ ತೊಳಲಾಟದಲ್ಲಿ ಕ್ಷಣಕಾಲ ಸಿಲುಕಿದ ದಂಪತಿಗಳು, ಕಟ್ಟಕಡೆಗೆ ತಮ್ಮ ಮಾನಹರಣ ಮಾತ್ರವಲ್ಲ, ಪ್ರಾಣ ಹೋಗುವಂತಹ ಸ್ಥಿತಿ ಬಂದರೂ ಶಿವನಾಣೆಗೆ ಭಂಗತರಬಾರದೆಂದು ನಿರ್ಧರಿಸಿ, ಮೌನದಿಂದ ನಿಲ್ಲುತ್ತಾರೆ. ಆಗ ವೇಷಧಾರಿ ಶಿವನೇ ಮತ್ತೊಂದು ಬಗೆಯ ಪ್ರಮಾಣವನ್ನು ಮಾಡಲು ಸೂಚಿಸುತ್ತಾನೆ.

ಒಂದು ಲಾತಕೋಲಿನ (ಸಂನ್ಯಾಸಿಯ ಕೈದಂಡ) ಎರಡು ತುದಿಗಳನ್ನು ಗಂಡ ಒಂದು ಕಡೆ, ಹೆಂಡತಿ ಒಂದು ಕಡೆ ಹಿಡಿದುಕೊಂಡು, ತಾವು ಪಾತ್ರೆಯನ್ನು ಕದ್ದಿಲ್ಲವೆಂದು ಹೇಳುತ್ತಾ, ನೀರಿನ ಕೊಂಡದಲ್ಲಿ ಮುಳುಗಿ ಮೇಲೇಳಬೇಕೆಂದು ಹೇಳಿದಾಗ, ತಿರುನೀಲಕಂಠ ದಂಪತಿಗಳು ಬಹು ಸಂತೋಷದಿಂದ ಒಪ್ಪಿಕೊಂಡು, ಅಂತೆಯೇ ಪ್ರಮಾಣ ಮಾಡತೊಡಗುತ್ತಾರೆ. ನೀರಿನಲ್ಲಿ ಮುಳುಗುವಾಗ ತೊಂಬತ್ತರ ವಯಸ್ಸಿನ ಮುದಿ ದಂಪತಿಗಳು, ನೀರಿನಿಂದ ಮೇಲೆದ್ದಾಗ ಹದಿನಾರರ ಹರೆಯದವರಾಗಿರುತ್ತಾರೆ. ಶಿವನ ಕೃಪೆಗೆ ಪಾತ್ರರಾದ ಈ ದಂಪತಿಗಳು, ಮತ್ತೆ ದಾಂಪತ್ಯದ ಸವಿಯನ್ನು ಅನುಭವಿಸುತ್ತ ಧರೆಯಲ್ಲಿ ಬಾಳುತ್ತಾರೆ.

ಈ ಕಥಾ ಪ್ರಸಂಗದಲ್ಲಿನ ಪವಾಡಗಳಾದ ಪೆಟ್ಟಿಗೆಯಿಂದ ಪಾತ್ರೆಯು ಕಣ್ಮರೆಯಾಗುವ ಮತ್ತು ಮುಪ್ಪಿನವರು ಹರಯದವರಾಗುವ ಪ್ರಸಂಗಗಳನ್ನು ಹೊರತುಪಡಿಸಿ, ಆಣೆ-ಪ್ರಮಾಣಗಳು ಸಾಮಾಜಿಕ ವ್ಯಕ್ತಿಗಳ ವೈಯಕ್ತಿಕ ಜೀವನದಲ್ಲಿ ಯಾವ ಯಾವ ಬಗೆಯ ಪರಿಣಾಮಗಳನ್ನು ಬೀರುತ್ತಿದ್ದವು ಎಂಬುದನ್ನು ವಿಶ್ಲೇಷಿಸಿದಾಗ ಅನೇಕ ಅಂಶಗಳು ತಿಳಿದುಬರುತ್ತವೆ.

ಪ್ರಾಚೀನ ಸಮಾಜದಲ್ಲಿ ವ್ಯಕ್ತಿಗಳ ನಡೆನುಡಿಗಳನ್ನು ನಿಯಂತ್ರಿಸಬಲ್ಲ ಶಕ್ತಿಯನ್ನು ಇವು ಪಡೆದಿದ್ದವು. ಮನುಷ್ಯರು ಇಡುವ ಆಣೆ ಮತ್ತು ಮಾಡುವ ಪ್ರಮಾಣಗಳೆಲ್ಲಕ್ಕೂ ದೇವರು ಸಾಕ್ಷಿಯಾಗಿರುತ್ತಾನೆಂಬ ದೃಢವಾದ ನಂಬಿಕೆ ಜನರ

ಮನದಾಳದಲ್ಲಿ ನೆಲೆಸಿತ್ತು. ಆದ್ದರಿಂದಲೇ ಸಾಮಾಜಿಕ ವ್ಯಕ್ತಿಗಳ ನಡೆನುಡಿಗಳ ಅಭಿವ್ಯಕ್ತಿಯಲ್ಲಿ ಆಣೆ-ಪ್ರಮಾಣಗಳು ಸಾಕ್ಷಿ ಪ್ರಜ್ಞೆಯಂತೆ ಕೆಲಸ ಮಾಡುತ್ತಿರುವುದನ್ನು ಕಾಣಬಹುದು.

ಜನಪದ ಸಾಹಿತ್ಯದಲ್ಲಿ "ಗೋವಿನ ಹಾಡು" ಎಂಬ ಕಥನ ಕಾವ್ಯ ಸುಪ್ರಸಿದ್ಧವಾಗಿದೆ. ಪುಣ್ಯಕೋಟಿ ಎಂಬ ಹಸು ಕಾಡಿನ ಮಧ್ಯದಲ್ಲಿ ಅರ್ಬುತನೆಂಬ ಹುಲಿಯ ಕೈಗೆ ಸಿಕ್ಕಿ ಬಿದ್ದು ಬಲಿಯಾಗುವ ಮುನ್ನ ಹುಲಿಯ ಮುಂದೆ ತನ್ನ ಅಂತಿಮ ಆಸೆಯೊಂದನ್ನು ತೋಡಿಕೊಳ್ಳುತ್ತದೆ :

ಒಂದು ಬಿನ್ನಹ ಹುಲಿಯೆ ಕೇಳು
ಕಂದನಿರುವನು ದೊಡ್ಡಿಯೊಳಗೆ
ಒಂದು ನಿಮಿಷದಿ ಮೊಲೆಯ ಕೊಟ್ಟು
ಬಂದು ಸೇರುವೆನಿಲ್ಲಿಗೆ

ಹಸುವಿನ ಮಾತನ್ನು ನಂಬದೆ ಹುಲಿಯು ತನ್ನ ಶಂಕೆಯನ್ನು ವ್ಯಕ್ತಪಡಿಸುತ್ತದೆ:

ಹಸಿದ ವೇಳೆಗೆ ಸಿಕ್ಕಿದೊಡವೆಯ
ವಶವಮಾಡದೆ ಬಿಡಲು ನೀನು
ನುಸುಳಿ ಹೋಗುವೆ ಮತ್ತೆ ಬರುವೆಯ
ಹುಸಿಯನಾಡುವೆ ಎಂದಿತು

ಆಗ ಪುಣ್ಯಕೋಟಿ ಹಸುವು ತಾನು ಎಂದಿಗೂ ಸತ್ಯವಾಕ್ಯಕ್ಕೆ ತಪ್ಪಿ ನಡೆಯುವುದಿಲ್ಲವೆಂಬ ಭರವಸೆಯನ್ನು ನೀಡುತ್ತಾ, ತನ್ನ ಮಾತುಗಳಿಗೆ ಪೂರಕವಾಗಿ ಆಣೆಗಳನ್ನಿಡುತ್ತದೆ :

ಮೂರು ಮೂರ್ತಿಗಳಾಣೆ ಬರುವೆನು
ಸೂರ್ಯ ಚಂದ್ರಮರಾಣೆ ಬರುವೆನು
ಧಾರಿಣೀ ದೇವಿಯಾಣೆ ಬರುವೆನು
ಎಂದು ಭಾಷೆಯ ಮಾಡಿತು.

ಕಂದನನ್ನು ಕಾಣುವ ಹಂಬಲದಲ್ಲಿರುವ ಪುಣ್ಯಕೋಟಿಯು ಹುಲಿಯ ಮನದಲ್ಲಿನ ಅನುಮಾನವನ್ನು ಹೋಗಲಾಡಿಸಿ, ತನ್ನ ಮಾತುಗಳ ಬಗ್ಗೆ ನಂಬಿಕೆಯನ್ನು ಮೂಡಿಸಲೆಂದು, ತಾನಿಡುತ್ತಿರುವ ಆಣೆಗಳಿಗೆ ಪೂರಕವಾಗಿ ಸಾಕ್ಷಿಯನ್ನು ನೀಡುತ್ತದೆ :

ಅಷ್ಟದಿಕ್ಪಾಲಕರು ಸಾಕ್ಷಿ
ಶ್ರೇಷ್ಠ ನವಗ್ರಹ ತಾರೆ ಸಾಕ್ಷಿ
ಸೃಷ್ಟಿಯಾ ಪತಿವ್ರತೆಯರ ಸಾಕ್ಷಿ
ನಿಷ್ಠೆಯಿಂದಲಿ ಕೇಳಯ್ಯಾ.

ಆದಿಶೇಷಾನಿಲರು ಸಾಕ್ಷಿ
ವೇದಶಾಸ್ತ್ರ ಪುರಾಣ ಸಾಕ್ಷಿ
ಮೋದದಿಂದಾಕಾಶವಗ್ನಿಯು
ಸಾಕ್ಷಿ ಸತ್ಯವು ಕೇಳಯ್ಯ

ಪುಣ್ಯಕೋಟಿಯ ಈ ಬಗೆಯ ನುಡಿಗಳಿಂದ ಮನಕರಗಿದ ಅರ್ಬುತನು ಅದಕ್ಕೆ ದೊಡ್ಡಿಯಲ್ಲಿರುವ ಕಂದನನ್ನು ನೋಡಿ ಬರಲು ಅನುಮತಿಯನ್ನು ನೀಡುತ್ತದೆ.

ಕಂದನಿಗೆ ಹಾಲುಣಿಸಿ, ಹಿತನುಡಿಗಳನ್ನಾಡಿ, ಹುಲಿಯ ಬಳಿಗೆ ಬಲಿಯಾಗಲು ಹೊರಟಾಗ, ಮತ್ತೆ ಹೋಗದಂತೆ ಕಂದನು ಇನ್ನಿಲ್ಲದಂತೆ ಮೊರೆಯಿಡುತ್ತದೆ. ಆದರೆ ಪುಣ್ಯಕೋಟಿಯ ಪಾಲಿಗೆ ಪ್ರಾಣದ ಉಳಿವಿಗಿಂತ, ಕೊಟ್ಟಿರುವ ಭಾಷೆಗೆ ತಪ್ಪಿ ನಡೆಯದ ನಿರ್ಧಾರವೇ ಮುಖ್ಯವಾಗುತ್ತದೆ. ತನ್ನ ಕಂದನನ್ನು ಸಮಾಧಾನ ಪಡಿಸುತ್ತಾ–

ಕೊಟ್ಟ ಭಾಷೆಗೆ ತಪ್ಪಲಾರೆನು
ಕೆಟ್ಟ ಯೋಚನೆ ಮಾಡಲಾರೆನು
ನಿಷ್ಠೆಯಿಂದಲಿ ಪೋಪೆನಲ್ಲಿಗೆ
ಕಟ್ಟಕಡೆಗಿದು ಖಂಡಿತ.

ಸತ್ಯವೇ ನಮ್ಮ ತಾಯಿತಂದೆಯು
ಸತ್ಯವೇ ನಮ್ಮ ಬಂಧುಬಳಗವು
ಸತ್ಯವಾಕ್ಯಕೆ ತಪ್ಪಿ ನಡೆದರೆ
ಸತ್ಯ ಶ್ರೀಹರಿ ಮೆಚ್ಚನು

ಕಂದನನ್ನು ತೊರೆದು, ಹುಲಿಯ ಬಳಿಗೆ ಪುಣ್ಯಕೋಟಿಯು ಬಂದಾಗ, ಅದರ ಸತ್ಯನಿಷ್ಠೆಯನ್ನು ಕಂಡು ಅರ್ಬುತನು ಅಚ್ಚರಿಗೊಳ್ಳುತ್ತದೆ. ಹುಲಿಯನ್ನು ಕೊಂದು ತಿನ್ನುವ ತನ್ನ ನಿರ್ಧಾರವನ್ನು ಕೈಬಿಟ್ಟು, ತನ್ನ ಕ್ರೌರ್ಯದ ಗುಣವನ್ನೇ ತ್ಯಜಿಸಿ, ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತದೆ.

ಪ್ರಾಣಿಗಳ ರೂಪಕದ ಈ ಕತೆಯಲ್ಲಿ ನಿರೂಪಣೆಗೊಂಡಿರುವ ಆಣೆಗಳನ್ನಿಡುವ ಸನ್ನಿವೇಶವನ್ನು ಅವಲೋಕಿಸಿದಾಗ ನಮ್ಮ ಜನಪದರ ದೈನಂದಿನ ಜೀವನದಲ್ಲಿ ಆಣೆಗಳು ಯಾವ ಬಗೆಯ ಕ್ರಿಯಾಶೀಲತೆಗೆ ಪ್ರೇರಣೆಯಾಗಿದ್ದವು ಎಂಬುದು ತಿಳಿದುಬರುತ್ತದೆ. ಸಂಕಷ್ಟದ ಸಂದರ್ಭಗಳಲ್ಲಿ ಇಡುತ್ತಿದ್ದ ಆಣೆಯು ಬಂದು ಎರಗಲಿರುವ ಆಪತ್ತಿನಿಂದ ಪಾರಾಗುವ ಉಪಾಯದ ಮಾರ್ಗವಾಗಿರಲಿಲ್ಲ; ಸತ್ಯವಾಗಿ, ಧರ್ಮವಾಗಿ, ನ್ಯಾಯವಾಗಿ ತಮಗೆ ಸರಿಯೆನಿಸಿದ್ದನ್ನು ಮಾಡುವುದಕ್ಕಾಗಿ ಅಥವಾ ಸಾಬೀತುಪಡಿಸುವುದಕ್ಕಾಗಿ ತಮ್ಮ ವ್ಯಕ್ತಿತ್ವವನ್ನೇ ಪಣವಾಗಿ ಒಡ್ಡುವ ಸಾಧನವಾಗಿರುತ್ತಿತ್ತು. ಪ್ರಾಚೀನ ಸಮಾಜದಲ್ಲಿನ ಜನಪದರ ದೈನಂದಿನ ಬದುಕಿನಲ್ಲಿ ಬಹುತೇಕ ಮಂದಿಯ ಪಾಲಿಗೆ ತಮ್ಮ ಲೌಕಿಕ ಜೀವನದ ಇತರ ಲಾಭಗಳಿಗಿಂತ ಹೆಚ್ಚಾಗಿ ಜೀವನದ ಏಳು-ಬೀಳುಗಳ ಸಂದರ್ಭಗಳಲ್ಲಿ ಇಟ್ಟ ಆಣೆ-ಕೊಟ್ಟ ಭಾಷೆ-ಮಾಡಿದ ಪ್ರಮಾಣಗಳಿಗೆ ಹಾನಿತಟ್ಟದಂತೆ ಬಾಳಬೇಕೆಂಬ ಆಶಯವೇ ಮುಖ್ಯವಾಗಿತ್ತೆಂಬುದನ್ನು ಈ ಜನಪದ ಕಥನ ಕಾವ್ಯ ಧ್ವನಿಸುತ್ತದೆ.

ಕ್ರಿ.ಶ. 10ನೆಯ ಶತಮಾನದಲ್ಲಿದ್ದ ಪಂಪ ಕವಿಯು ರಚಿಸಿರುವ ''ವಿಕ್ರಮಾರ್ಜುನ ವಿಜಯ'' ಎಂಬ ಕಾವ್ಯದಲ್ಲಿನ ಒಂದು ಪ್ರಸಂಗವಿದು : ಹಸ್ತಿನಾಪುರವನ್ನು ಆಳುತ್ತಿದ್ದ ಶಂತನು ಚಕ್ರವರ್ತಿಯು ಒಮ್ಮೆ ಕಾಡಿನಲ್ಲಿ ಬೇಟೆಯಾಡುತ್ತ ಬರುತ್ತಿರುವಾಗ ಯೋಜನಗಂಧಿಯೆಂಬ ಯುವತಿಯ ಚೆಲುವಿನಿಂದ ಆಕರ್ಷಿತನಾಗಿ, ಆಕೆಯಲ್ಲಿ ಅನುರಕ್ತಗೊಂಡು, ಅವಳ ಕೈಯನ್ನು ಹಿಡಿದುಕೊಂಡುದನ್ನು ಕವಿಯು ''ದಿಬ್ಯಂಬಿಡಿವಂತೆವೋಲ್'' ಎಂದು ಉಪಮಾಲಂಕಾರದ ಮೂಲಕ ಬಣ್ಣಿಸಿದ್ದಾನೆ (ಪ್ರಥಮಾಶ್ವಾಸ-ಪದ್ಯ 70). ಯುವಕ ಗಾಂಗೇಯನ ತಂದೆಯಾಗಿರುವ ಶಂತನು ಚಕ್ರವರ್ತಿಯು ಈಗಾಗಲೇ ಮಧ್ಯವಯಸ್ಕನಾಗಿದ್ದಾನೆ. ಇಷ್ಟು ವಯೋಮಾನದ ವ್ಯಕ್ತಿಯು ಯೌವನಕ್ಕೆ ಅಡಿಯಿಟ್ಟಿರುವ ಯೋಜನಗಂಧಿಯ ಕೈಹಿಡಿಯುವುದರಿಂದ ಕುರುಕುಲದ ರಾಜವಂಶವು ಮುಂದಿನ ದಿನಗಳಲ್ಲಿ ನಾನಾ ಬಗೆಯ ಕಠಿಣತಮ ಪರೀಕ್ಷೆಗಳಿಗೆ ಗುರಿಯಾಗಲಿದೆ ಎಂಬುದನ್ನು ಕವಿಯು ಈ ಉಪಮೆಯ ಮೂಲಕ ಧ್ವನಿಸಿದ್ದಾನೆ.

''ದಿಬ್ಯ'' ಎನ್ನುವುದು ಪ್ರಮಾಣವನ್ನು ಮಾಡುವ ಒಂದು ಆಚರಣೆ (ರಿಚುಯಲ್). ಇದು ಪ್ರಾಚೀನ ಕಾಲದ ನ್ಯಾಯ ನೀಡಿಕೆಯ ಸಂದರ್ಭಗಳಲ್ಲಿ ಆಚರಿಸಲಾಗುತ್ತಿದ್ದ ಒಂದು ಕಟ್ಟಳೆಯಾಗಿತ್ತು. ವ್ಯಕ್ತಿಯೊಬ್ಬನು/ಳು ಗುರುತರವಾದ ಅಪರಾಧಕ್ಕೆ ಗುರಿಯಾದಾಗ, ಅವನ/ಅವಳ ಮೇಲಣ ಅಪರಾಧವನ್ನು

ರುಜುವಾತು ಪಡಿಸಲು ಯಾವುದೇ ವಿಧವಾದ ಸಾಕ್ಷಿ, ಪುರಾವೆ ಅಥವಾ ಇನ್ನಿತರ ಆಧಾರಗಳು ದೊರೆಯದಿದ್ದಾಗ, ಅಂತಿಮ ಹಂತದಲ್ಲಿ ನ್ಯಾಯಾಸ್ಥಾನವು ಆರೋಪಿಯನ್ನು ದಿಬ್ಯದ ಪರೀಕ್ಷೆಗೆ ಒಡ್ಡುತ್ತಿತ್ತು. ದಿಬ್ಯದ ಆಚರಣೆಯ ರೀತಿಗಳು ಏಳು, ಒಂಬತ್ತು ಮತ್ತು ಹತ್ತು ಬಗೆಗಳಲ್ಲಿ ಇದ್ದುವೆಂದು ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ವರ್ಣಿಸಲಾಗಿದೆ. ಅವುಗಳಲ್ಲಿ ಬಹಳ ಪ್ರಚಲಿತವಿದ್ದ ವಿಧಿಗಳೆಂದರೆ ಬೆಂಕಿ, ವಿಷ ಸರ್ಪ ಮತ್ತು ವಿಷ ವಸ್ತುಗಳ ಮೂಲಕ ನಡೆಸುತ್ತಿದ್ದ ಪ್ರಮಾಣ ವಚನದ ಆಚರಣೆಗಳು :

1) ಆರೋಪಕ್ಕೆ ಗುರಿಯಾದ ವ್ಯಕ್ತಿಯು ಚೆನ್ನಾಗಿ ಕಾದು ಕೆಂಪಾಗಿರುವ ಕಬ್ಬಿಣದ ಸಲಾಕೆಯೊಂದನ್ನು ಬರಿಗೈಯಲ್ಲಿ ಹಿಡಿದುಕೊಂಡು, ತನ್ನ ಮೇಲಣ ಆರೋಪವನ್ನು ನಿರಾಕರಿಸಬೇಕು. ಈ ಅವಧಿಯಲ್ಲಿ ಆರೋಪಿಯ ಕೈ ಸುಟ್ಟು ಹೋಗದಿದ್ದರೆ, ಅವನನ್ನು/ಅವಳನ್ನು ನಿರಪರಾಧಿಯೆಂದು ನ್ಯಾಯಸ್ಥಾನ ನಿರ್ಧರಿಸುತ್ತಿತ್ತು.

2) ಮಡಕೆಯೊಂದರಲ್ಲಿ ವಿಷ ಸರ್ಪವೊಂದನ್ನು ಇಟ್ಟು, ಆರೋಪಿಯನ್ನು ಅದರೊಳಗೆ ಇಂತಿಷ್ಟು ಸಮಯ ಹಸ್ತವನ್ನಿಡಲು ಸೂಚಿಸಲಾಗುತ್ತಿತ್ತು. ಆರೋಪಿಯು ಮಡಕೆಯೊಳಕ್ಕೆ ಕೈಯಿಟ್ಟ ಸಮಯದಲ್ಲಿಯೇ ತನ್ನ ಮೇಲಣ ಆರೋಪಗಳು ಸುಳ್ಳೆಂದು ನುಡಿಯಬೇಕಿತ್ತು. ಈ ನಿರ್ದಿಷ್ಟ ಅವಧಿಯಲ್ಲಿ ಹಾವು ಆರೋಪಿಯನ್ನು ಕಚ್ಚದಿದ್ದರೆ, ಆತ/ಆಕೆಯನ್ನು ನಿರಪರಾಧಿಯೆಂದು ನ್ಯಾಯಾಸ್ಥಾನ ತೀರ್ಮಾನಿಸುತ್ತಿತ್ತು.

3) ಆರೋಪಿಗೆ ಬಟ್ಟಲೊಂದರಲ್ಲಿ ವಿಷವನ್ನು ನೀಡಿ, ಅದನ್ನು ಕುಡಿಯಲು ಆದೇಶವನ್ನು ನೀಡಲಾಗುತ್ತಿತ್ತು. ಆರೋಪಿಯು ತನ್ನ ಮೇಲಣ ಆರೋಪವನ್ನು ನಿರಾಕರಿಸುವ ನುಡಿಗಳನ್ನಾಡುತ್ತ ವಿಷವನ್ನು ಕುಡಿಯಬೇಕಿತ್ತು. ಆರೋಪಿಯು ಸಾಯದಿದ್ದರೆ ಅವನನ್ನು/ಅವಳನ್ನು ನಿರಪರಾಧಿಯೆಂದು ನ್ಯಾಯಾಸ್ಥಾನ ನಿರ್ಧರಿಸುತ್ತಿತ್ತು.

ಪ್ರಾಚೀನ ಕಾಲದ ಸಮಾಜದಲ್ಲಿ ನ್ಯಾಯ ನಿರ್ಣಯ ವ್ಯವಸ್ಥೆಯ ಒಂದು ಭಾಗವಾಗಿದ್ದ ದಿಬ್ಯದ ಆಚರಣೆಯನ್ನು ನಾವು ಅಂದಿನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ, ದಿಬ್ಯದ ಆಚರಣೆಯು ಎಷ್ಟೊಂದು ಅಮಾನವೀಯ ಮತ್ತು ಕ್ರೂರವಾಗಿತ್ತೆಂಬುದು ಮನದಟ್ಟಾಗುತ್ತದೆ.

ಪ್ರಾಚೀನ ಕಾಲದ ನಮ್ಮ ಸಾಮಾಜಿಕ ಜೀವನದಲ್ಲಿ ಜಾತಿಯ ಮೇಲು-ಕೀಳಿನ ಶ್ರೇಣೀಕೃತ ವ್ಯವಸ್ಥೆ ಬಹಳ ಕಟ್ಟುಪಾಡುಗಳಿಂದ ಕೂಡಿತ್ತು. ಒಟ್ಟು ಜನಸಮುದಾಯದಲ್ಲಿ ನೂರಕ್ಕೆ ಎಂಬತ್ತರಷ್ಟು ಮಂದಿ ಕೀಳುಜಾತಿಯವರೆಂಬ ಕಾರಣದಿಂದಲೇ ವಿದ್ಯೆ, ಸಂಪತ್ತು ಮತ್ತು ಅಧಿಕಾರಗಳಿಂದ ವಂಚಿತರಾಗಿ ಅತ್ಯಂತ ಕೀಳರಿಮೆಯಿಂದ ಬಾಳುತ್ತಿದ್ದರು.

ಸಂಪತ್ತನ್ನು ಹೊಂದಿ ಸುಖಿಸುವ ಒಡೆಯರ ಮತ್ತು ಯಾವುದೇ ಸಂಪತ್ತಿಲ್ಲದೆ ನಿರಂತರವಾಗಿ ದುಡಿಯುವ ಶ್ರಮಜೀವಿಗಳಾದ ಆಳುಗಳಿಂದ ಕೂಡಿದ ಊಳಿಗಮಾನ್ಯ ಪದ್ಧತಿಯ ಆರ್ಥಿಕ ವ್ಯವಸ್ಥೆಯು ಸಮಾಜದ ಬಹುತೇಕ ಮಂದಿಯನ್ನು ಬಡತನದ ಅಂಚಿನಲ್ಲಿಟ್ಟಿತ್ತು.

ವಂಶ ಪರಂಪರೆಯಿಂದ ಪಟ್ಟವೇರುತ್ತಿದ್ದ ರಾಜ, ಮಂಡಲಾಧೀಶ ಮತ್ತು ಪಾಳ್ಳೇಗಾರರ ನಿರಂಕುಶ ಪ್ರಭುತ್ವ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಕೆಳಸ್ತರದಲ್ಲಿದ್ದವರನ್ನು ಸದಾಕಾಲ ತನ್ನ ಅಂಕೆಯಲ್ಲಿಟ್ಟುಕೊಂಡಿರುತ್ತಿತ್ತು.

ಇಂತಹ ವ್ಯವಸ್ಥೆಯ ಸಾಮಾಜಿಕ ಬದುಕಿನಲ್ಲಿ ಆರೋಪಕ್ಕೆ ಗುರಿಯಾಗುತ್ತಿದ್ದ ವ್ಯಕ್ತಿಗಳು ಬಹುತೇಕ ಸಂದರ್ಭಗಳಲ್ಲಿ ಕೆಳಸ್ತರಕ್ಕೆ ಸೇರಿದವರೇ ಆಗಿರುತ್ತಿದ್ದರು. ಜಾತಿ ಬಲ, ಹಣ ಬಲ ಮತ್ತು ಅಧಿಕಾರದ ಬಲವಿಲ್ಲದ ವ್ಯಕ್ತಿಗಳು ಅಸಹಾಯಕರಾಗಿ ದಿಬ್ಯದ ಪರೀಕ್ಷೆಗೆ ಬಲಿಯಾಗಲೇಬೇಕಿತ್ತು. ಏಕೆಂದರೆ ಕಾದ ಕಬ್ಬಿಣದ ಸಲಾಕೆಯನ್ನು ಹಿಡಿದುಕೊಂಡಾಗ, ಹಿಡಿದವರ ಕೈ ಸುಟ್ಟೇ ಸುಡುತ್ತದೆ; ವಿಷ ಸರ್ಪವುಳ್ಳ ಮಡಿಕೆಯೊಳಕ್ಕೆ ಕೈಹಾಕಿದಾಗ, ಸರ್ಪ ಕಚ್ಚೇ ಕಚ್ಚುತ್ತದೆ; ವಿಷವನ್ನು ಕುಡಿದಾಗ ಸಾವು ಬಂದೇ ಬರುತ್ತದೆ. ಈ ಹಿನ್ನೆಲೆಯಲ್ಲಿ ದಿಬ್ಯದ ಆಚರಣೆಯನ್ನು ಅವಲೋಕಿಸಿದಾಗ ಪ್ರಾಚೀನ ಕಾಲದಲ್ಲಿನ ಅಧಿಕಾರಸ್ಥ ಸಮುದಾಯವು ತನ್ನ ಶೋಷಣೆಯ ವ್ಯವಸ್ಥೆಯನ್ನು ನಿರಾತಂಕವಾಗಿ ಮುಂದುವರೆಸಿಕೊಂಡು ಹೋಗಲು ನ್ಯಾಯ ವಿತರಣೆಯ ಹೆಸರಿನಲ್ಲಿ ಮಾಡಿಕೊಂಡಿದ್ದ ಒಂದು ಕ್ರೂರಪದ್ಧತಿಯೇ ದಿಬ್ಯವೆಂದು ನಿರ್ಣಯಿಸಬಹುದು. ಇಂದಿನ ಆಧುನಿಕ ಕಾಲದಲ್ಲಿಯೂ ನಾನಾ ಬಗೆಯ ಆರೋಪಗಳಿಗೆ ಗುರಿಯಾಗಿ, ದೇವರ ಸಮ್ಮುಖದಲ್ಲಿಯೋ ಅಥವಾ ಮತ್ತಾವುದೋ ಜೀವಿಗಳನ್ನು ಅಥವಾ ವಸ್ತುಗಳನ್ನೋ ಹಿಡಿದುಕೊಂಡು ಪ್ರಮಾಣವನ್ನು ಮಾಡಲೇಬೇಕಾದ ಇಕ್ಕಟ್ಟಿಗೆ ಒಳಗಾಗುವವರಲ್ಲಿ ಬಹುತೇಕ ಮಂದಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದುರ್ಬಲರಾಗಿರುವದನ್ನು ನಾವು ಕಾಣಬಹುದು.

ಜನಪದ ಸಮಷ್ಟಿ ಪ್ರಜ್ಞೆ ಕಲ್ಪಿಸಿಕೊಂಡಿರುವ ಎಷ್ಟೋ ವಿಷಯಗಳಲ್ಲಿ ಆಣೆ ಪ್ರಮಾಣಗಳೂ ಸೇರಿವೆ. ಇವುಗಳ ಅಧ್ಯಯನದ ವಿಧಿ ವಿಧಾನ, ಉಪಯುಕ್ತತೆ ಇತರ ಅಧ್ಯಯನದ ಉಪಯುಕ್ತತೆಗಿಂತ ಕಡಿಮೆಯಾದುದೇನಲ್ಲ. ಜನಪದ ಕಲ್ಪನೆಯಲ್ಲಿ ವ್ಯರ್ಥವಾದುದು ಯಾವುದೂ ಇದ್ದಂತಿಲ್ಲ. ಆಣೆ ಪ್ರಮಾಣಗಳು ಅನ್ವಯಿಕ ಜಾನಪದ ಸಂದರ್ಭದಲ್ಲಿ ಪ್ರಸ್ತುತತೆ ಕಾಯ್ದುಕೊಂಡಿರುವುದು ಕುತೂಹಲಕಾರಿಯಾಗಿದೆ.

ಸಹಾಯಕ ಸಾಹಿತ್ಯ

1. A. E. CRAWLEY., Oath - Introductory and Primitive (page ೪೩೦-೪೩೪)

ORDEAL - Introductory and Primitive
(page ೫೦೭-೫೧೨)

Both articles Printed in

JAMES HASTINGS (Ed.)
(second impression ೧೯೩೦) :

Encyclopaedia of Religion And Ethics - Volume - ೯,

Edinburgh : T. & T. Clark, ೩೮ George street.

ಭಾಷಿಕ ಜಾನಪದದಲ್ಲಿ ಆಣೆ ಪ್ರಮಾಣಗಳದು ಪ್ರಮುಖ ಅಂಗ. ಧಾರ್ಮಿಕ ಹಿನ್ನೆಲೆಯ ಈ ಜನಪದ ನಡಾವಳಿಯಲ್ಲಿ ಮನುಕುಲದ ಅಂತ:ಸಾಕ್ಷಿಗೆ ಅಗ್ರಸ್ಥಾನ. ಇದು ಪ್ರಾಮಾಣಿಕತೆಯ ಒರೆಗಲ್ಲು; ನ್ಯಾಯ ನಿರ್ಣಯದ ಪ್ರಮುಖ ಸಾಕ್ಷಿ; ಧರ್ಮಾಚರಣೆಗೆ ಮುಖವಾಣಿ; ಮೌಲ್ಯಾಧಾರಿತ ವಚನಶ್ರೇಣಿ. ನ್ಯಾಯಾಲಯದ ಕಟೆಕಟೆ ಹತ್ತದೆಯೇ ಎಷ್ಟೋ ವಾದವಿವಾದಗಳನ್ನು ಸುಲಭವಾಗಿ ತೀರ್ಮಾನಿಸುತ್ತಿದ್ದ ಮಾನವೀಯ ಮನೋಧರ್ಮ. ಪ್ರಾಚೀನ ಕಾಲದಿಂದ ಮನುಕುಲದಲ್ಲಿ ರೂಢಿಯಲ್ಲಿರುವ ಆಣೆ ಪ್ರಮಾಣಗಳು ಆಧುನಿಕ ಕಾಲದಲ್ಲೂ ಜನಪದರಂತೆ ಶಿಷ್ಟಪದರಲ್ಲೂ ಮುಂದುವರಿಯುತ್ತಿರುವುದು ಕುತೂಹಲಕಾರಿಯಾಗಿದೆ.

ಭಾಷಿಕ ಜಾನಪದ **ಬೈಗುಳ** ಅಧ್ಯಯನದಲ್ಲಿ ಪಿಎಚ್.ಡಿ ಪದವಿ ಗಳಿಸಿರುವ ಡಾ. ಸಿ. ಪಿ. ನಾಗರಾಜ ಅವರು ಸೋದಾಹರಣವಾಗಿ ಪ್ರಸ್ತುತ ಗ್ರಂಥವನ್ನು ಬರೆದಿದ್ದಾರೆ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು